

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 07 Issue : 133 Tuesday 28-01-2025 E-mail : maruti.b.hosamani76@gmail.com Page: 4 Price : Rs. 1/-


## ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರಿಗೆ ಅವಮಾನ: ಖಂಡಿಸಿ ಡಿ.ಎಸ್.ಎಸ್ ತೀವ್ರ ಆಕ್ರೋಶದ ಒತ್ತಾಯ



**ಸಿಹಿ ಕಹಿ ಸುದ್ದಿ**

**ಹೂವಿನ ಹಿಪ್ಪರಗಿ :** ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಹೂವಿನ ಹಿಪ್ಪರಗಿ ಗ್ರಾಮದಲ್ಲಿ ಡಾ, ಬಾಬಾ ಸಾಹೇಬ್ ಅಂಬೇಡ್ಕರ್ ಅವರ 76 ನೇ. ಗಣರಾಜ್ಯೋತ್ಸವ ದಿನಾಚರಣೆ–ಯ ಆಚರಿಸಿದೆ ಅವಮಾನ ನಡೆದ ಘಟನೆಯನ್ನು ಬಿಜ್ಜಳ ಹೆದ್ದಾರಿ ತಡೆದು ಪ್ರತಿಭಟನೆ ಮಾಡಿದ ದಲಿತ ಮುಖಂಡರು ಹಾಗೂ ಕಾರ್ಯಕರ್ತರು ಗ್ರಾಮ ಪಂಚಾಯತಿ ಅಧಿಕಾರಿಗಳು ವಿರುದ್ಧ ಆಕ್ರೋಶ ಕೂಗಿದರು.

ದೇಶದ ಅದೆಷ್ಟೋ ರಾಷ್ಟ್ರಗಳು ಜ್ಞಾನದ ದೇಗುಲವನ್ನು ಅಪ್ಪಿಕೊಂಡು ಮೆಚ್ಚಿಕೊಂಡು ನಾ ಮುಂದು ತಾ ಮುಂದು ಅಂತಾ ಪೈಪೋಟಿ ಗೀಳಿದು ಪೂಜೆ ಪುರಸ್ಕಾರಗಳು ದೈನಂದಿನ ಪ್ರತಿ ನಿಮಿಷಗಳಲ್ಲಿ ಪ್ರಶಂಸನೀಯಕ್ಕೆ ಒಳಪಡುವ ವ್ಯಕ್ತಿ ಯಾರಾದರೂ ಅಖಂಡ ದೇಶದಲ್ಲಿ ಇದ್ರೆ ಅದು ಡಾ, ಬಾಬಾ ಸಾಹೇಬ್ ಅಂಬೇಡ್ಕರ್ ಅಂತಾ ಹೇಳಬಹುದು. ಇಡೀ ದೇಶ ಇಂದು ಪ್ರಶಂಸನೀಯಕ್ಕೆ ಒಳಪಟ್ಟಿದೆ ಎಂದರೆ ಅದು ಡಾ, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪ್ರಕಾಶವಾಗಿ ಪ್ರಜ್ವಲಿಸುತಿದೆ ಎಂದು ಡಿ.ಎಸ್. ಎಸ್ ಹೋರಾಟಗಾರರ ಹೇಳಿಕೆ ಆಗಿದೆ. ದೇಶದಲ್ಲಿ ಇನ್ನೂ ಕೂಡ ತಾರತಮ್ಯ ತಾಂಡವಾಡುತ್ತಿದೆ ಅನ್ನುವುದಕ್ಕೆ ಬೇರೆ ಉದಾಹರಣೆ ಬೇಕಿಲ್ಲ ಅವರು ಯಾರೇ ಆಗಿರಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಇನ್ನೇನಾದರೂ ಅವಮಾನ ಅಗೌರವದಿಂದ ಕಂಡು ಬಂದಲ್ಲಿ ಅವರು ಯಾರೇ ಇರಲಿ ಎಷ್ಟೇ ಪ್ರಬಲ ಪ್ರಭಾವಿ ಇರಲಿ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ಗಡಿಪಾರು ಮಾಡಬೇಕೆಂದು ಡಿ.ಎಸ್.ಎಸ್ ಹೋರಾಟಗಾರರ ಆಕ್ರೋಶದ ಒತ್ತಾಯ ಆಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮೈಬೂಬಬಾಷ. ಮನಗೂಳಿ.ತಾಳಿಕೋಟೆ**

## ಕರ್ನಾಟಕದ ಯುವಕರಿಗಾಗಿ ಕೆ.ಆರ್.ಎಸ್ ಪಕ್ಷದಿಂದ ಹಕ್ಕೊತ್ತಾಯದ ಸಮಾವೇಶ

**ಸಿಹಿ ಕಹಿ ಸುದ್ದಿ**

**ಬೆಳಗಾವಿ :** ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವತಿಯಿಂದ ಬೆಳಗಾವಿಯ ಜಿಲ್ಲಾ ಕ್ರೀಡಾಂಗಣದಲ್ಲಿ ಕರ್ನಾಟಕದ ಕನ್ನಡಿಗರ ಲಕ್ಷಾಂತರ ಯುವಕರ, ಯುವತಿಯರ ವಿದ್ಯಾರ್ಥಿಗಳಿಗೆ ಅನುಕೂಲ ವಾಗುವಂತಹ ಉದ್ಯೋಗ ಸೃಷ್ಟಿ ಮಾಡುವಲ್ಲಿ ವಿಫಲವಾದ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ವಿರುದ್ಧ ಬೃಹತ್ ಸಮಾವೇಶವನ್ನು ಆಯೋಜಿಸಲಾಗಿತ್ತು.

ರಾಷ್ಟ್ರೀಯ ಯುವ ಸಮಾವೇಶ ಕಾರ್ಯಕ್ರಮದಲ್ಲಿ ಕೆ.ಆರ್.ಎಸ್ ಪಕ್ಷದ ವತಿಯಿಂದ ರಾಜ್ಯದ ಲಕ್ಷಾಂತರ ಇವರಿಗೆ ಇರುವಂತಹ ಸಮಸ್ಯೆಗಳು, ಕುಂದು–ಕೊರತೆಗಳು, ಉದ್ಯೋಗದಲ್ಲಿ ತಾರತಮ್ಯ ಹಾಗೂ ಬ್ರಷ್ಟಾಚಾರ ವಿರುದ್ಧ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಹಂತ ಹಂತವಾಗಿ ರಾಜ್ಯದ ತುಂಬೆಲ್ಲ ಹೋರಾಟಗಳನ್ನ, ಅಭಿಯಾನಗಳನ್ನ, ಕಾರ್ಯಕ್ರಮಗಳನ್ನ



ಹಮ್ಮಿಕೊಳ್ಳಲಾಗುತ್ತದೆ ಎಂದು ಕೆ ಆರ್.ಎಸ್. ಪಕ್ಷದ ರಾಜ್ಯಾಧ್ಯಕ್ಷರ ರವಿಕೃಷ್ಣ ರೆಡ್ಡಿ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಕಾಂಗ್ರೆಸು, ಬಿಜೆಪಿ, ಜೆಡಿಎಸ್ ಪಕ್ಷಗಳು ರಾಜ್ಯದ ಯುವಕ ಯುವತಿಯರಿಗೆ, ಕನ್ನಡಿಗರಿಗೆ ಮೋಸ ಮಾಡುತ್ತಿದ್ದಾರೆ. ಕೇವಲ ಚುನಾವಣೆ ಸಂದರ್ಭದಲ್ಲಿ ಮಾತ್ರ ಹಲವಾರು ಸುಳ್ಳು ಪೋಳ್ಳು ಭರವಸೆಗಳನ್ನ ನೀಡಿ ಯುವಕರ ಮನಸ್ಸನ್ನು ಬದಲಾಯಿಸಿ ಮತಗಳನ್ನು ಪಡೆದು ಈಗ ಯುವಕರಿಗೆ ಬೇಕಾದಂತ ಮೂಲಭೂತ ಸೇವೆ, ಸೌಲಭ್ಯಗಳು,ಸೌಕರ್ಯಗಳನ್ನುನೀಡುವಲ್ಲಿ ವಿಫಲವಾಗಿವೆ. ಹಾಗಾಗಿ ಯುವಕರು ಜಾಗೃತರಾಗ ಬೇಕು ಕೆ.ಆರ್.ಎಸ್ ಪಕ್ಷದ ತತ್ವ ಸಿದ್ಧಾಂತಗಳನ್ನ ಒಪ್ಪಿ ಕೆ.ಆರ್.ಎಸ್ ಪಕ್ಷದ ನಾಯಕರಾಗ ಬೇಕೆಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷ ರಘು ಜಾಣಗೆರೆ, ಜ್ಞಾನ ಸಿಂಧು ಸ್ವಾಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ದೀಪಕ್ ಸಿ.ಎನ್ ಬೆಳಗಾವಿ ಜಿಲ್ಲಾ ಉಸ್ತುವಾರಿ ಬಿ.ಜಿ ಕುಂಬಾರ್, ಜಿಲ್ಲಾಧ್ಯಕ್ಷ ಸಿದ್ದು ಕಣ್ಣಗ್ಬರ್ಗಿ ಸೇರಿದಂತೆ ಹಲವಾರು ರಾಜ್ಯ ಸಮಿತಿ ಜಿಲ್ಲಾ ಸಮಿತಿ ಸದಸ್ಯರು ಹಾಗೂ ರಾಜ್ಯದ ಮೂಲೆ ಮೂಲೆಯಿಂದ ಬಂದ ಪಕ್ಷದ ಪದಾಧಿಕಾರಿಗಳು ಈ ಸಭೆಯಲ್ಲಿ ಭಾ–ಗಿಯಾಗಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್.ವಾಯ್.ಕಿಳ್ಳಿ. ಇಲಕಲ್ಲ**

## ಜನಸೇವಾ ಫೌಂಡೇಷನ್ ರಾಜ್ಯಾಧ್ಯಕ್ಷ ಜಾವಿದ್‌ಖಾನ್‌ರಿಂದ ಲೋಕಾಯುಕ್ತಕ್ಕೆ ಮನವಿ

**ಮಾನ್ವಿ :** ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲೆಗಳಲ್ಲಿ ಸೌಲಭ್ಯಗಳಿಲ್ಲದೆ ವಿದ್ಯಾರ್ಥಿಗಳು ವಂಚನೆಯ ನಡುವೆ ಬದುಕುತ್ತಿದ್ದಾರೆ. ಇಂದಿರಾಗಾಂಧಿ ಕುರ್ಡಿ ವಸತಿ ಶಾಲೆ ಪರವಾನಗಿ ಇಲ್ಲದೆ ಕಟ್ಟಡ ಇದೆ, ಹೀಗಾಗಿ ಸರಕಾರದ ನಿಯಮಗಳೆ ಮಾನ್ವಿಯಲ್ಲಿ ಗಾಳಿಗೆ ತೂರಲಾಗಿದೆ ಎಂದು ಜನಸೇವಾ ಫೌಂಡೇಷನ್ ರಾಜ್ಯಾಧ್ಯಕ್ಷ ಜಾವಿದ್ ಖಾನ್ ಲೋಕಾಯುಕ್ತ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.



ಮಾನ್ವಿ ತಾಲೂಕಿನ ಕುರ್ಡಿ ಇಂದಿರಾಗಾಂಧಿ ವಸತಿ ಶಾಲೆಯಲ್ಲಿ ಮಕ್ಕಳಿಗೆ ಸೌಲಭ್ಯಗಳಿಲ್ಲದೆ ಒಂದೇ ಕೊಠಡಿಯಲ್ಲಿ 30 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಉಳಿದು ಕೊಂಡಿದ್ದಾ–ರೆ. ಕಟ್ಟಡ ಪರವಾನಗಿ ಇಲ್ಲದೆ ಬಿಲ್ಡಿಂಗ್ ನಿರ್ಮಾಣ ಮಾಡಲಾಗಿದೆ. ಆದರೆ ವಿದ್ಯಾರ್ಥಿಗಳಿಗೆ ಅನಾಹುತವಾದರೆ ಯಾರು ಹೊಣೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲೆಗಳಲ್ಲಿ ಸೌಲಭ್ಯಗಳಿಲ್ಲದೆ ಬದುಕುತ್ತಿದ್ದಾ–ರೆ. ಆದರೆ ತಾಲೂಕ ಅಧಿಕಾರಿ ನಟರಾಜ ಅವರ ದುರಾಡಳಿತ ಇಲ್ಲಿ ಎದ್ದು ಕಾಣುತ್ತದೆ ಎಂದು ಜಾವಿದ್ ಖಾನ್ ಮಾಧ್ಯಮದವರ ಮುಂದೆ ಆಕ್ರೋಶ ವ್ಯಕ್ತಪಡಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಪಂಚಮುಖಿ ಆಂಜನೇಯ ದೇವಸ್ಥಾನದ ವಾರ್ಷಿಕೋತ್ಸವ: ಅದ್ದೂರಿ ಕುಂಭಮೇಳ



**ಬಾಗಲಕೋಟೆ :** ಮುಚಖಂಡಿ ಕ್ರಾಸ್ ಬಳಿಯಿರುವ ಪಂಚಮುಖಿಆಂಜನೇಯದೇವಸ್ಥಾನದವಾರ್ಷಿಕೋತ್ಸವ ಸುಮಂಗಲೆಯರಿಂದ ಪ್ರಯುಕ್ತ ಕುಂಭಮೇಳ ನಡೆಯಿತು. ನಗರದ ಹೊಳೆ ಆಂಜನೇಯ ದೇವಸ್ಥಾನದಿಂದ ಪಂಚಮುಖಿ ಆಂಜನೇಯ ದೇವಸ್ಥಾನದ ವರೆಗೆ ವಿವಿಧ ವಾದ್ಯ ಮೇಳಗಳೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಕುಂಭಮೇಳವು ಸಾರ್ವಜನಿಕರ ಗಮನ ಸೆಳೆಯಿತು. ಕಾಮಧೇನು ಸಂಸ್ಥೆಯ ಅಧ್ಯಕ್ಷ ರವಿ ಕುಮಟಗಿಯವರು ಮೆರವಣಿಗೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರಾದ ಸಂತೋಷ ಹೊಕ್ರಾಣಿ, ಬಸವರಾಜ ಕಟಗೇರಿ, ವಿಜಯ ಸುಲಾಖೆ, ಅಶೋಕ ಮುತ್ತಿನಮಠ, ರಾಜು ಗವಳಿ, ಪಾಲ್ಗೊಂಡಿದ್ದರು.

## ಔಷಧ ವ್ಯಾಪಾರಿಗಳಿಂದ ರಕ್ತದಾನ ಶಿಬಿರ

'ಅಗತ್ಯ ಸಮಯದಲ್ಲಿ ರಕ್ತವನ್ನು ಪೂರೈಸುವುದರಿಂದ ರೋಗಿಗಳ ಪ್ರಾಣವನ್ನು ಉಳಿಸಬಹುದು, ರಕ್ತದಾನವು ಅತ್ಯಂತ ಶ್ರೇಷ್ಠ ದಾನವಾಗಿದೆ' ಎಂದು ಡಾ. ಸುನಿತಾ ಕಠಾರಿ ಅಭಿಪ್ರಾಯಪಟ್ಟರು. ಅಖಿಲ ಭಾರತ ಔಷಧ ವ್ಯಾಪಾರಿಗಳ ಸಂಘವು ನೀಡಿದ ಕರೆಯ ಮೇರೆಗೆ ಇಲ್ಲಿಯ ವಿಜಯ ಮಹಾಂತ ರಕ್ತ ಕೇಂದ್ರದಲ್ಲಿ ತಾಲೂಕಾ ಮಟ್ಟದ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಹುನಗುಂದ ಹಾಗೂ ಇಳಕಲ್ ತಾಲೂಕಿನ ಔಷಧ ವ್ಯಾಪಾರಿಗಳು ಈ ಶಿಬಿರದಲ್ಲಿ ಪಾಲ್ಗೊಂಡಿದ್ದರು. ಸಂಘದ ರಾಷ್ಟ್ರೀಯ ಅಧ್ಯಕ್ಷ ಜಗನ್ನಾಥ ಶಿಂಧೆ ಅವರ 75ನೆಯ ಜನ್ಮದಿನೋತ್ಸವವನ್ನು ರಕ್ತದಾನದ ಮೂಲಕ ಆಚರಿಸಲಾಯಿತು.




ಮುಖ್ಯ ಅತಿಥಿಗಳಾಗಿ ಆಗಮಿಸಿದ ಪ್ರಶಸ್ತಿ ವಿಜೇತ ಶಿಕ್ಷಕರಾದ ಬಾಲಕೃಷ್ಣ ಗಜೇಂದ್ರಗಡ ಅವರು "ರಕ್ತದಾನವು ಸಾಮಾಜಿಕ ಜವಾಬ್ದಾರಿಯಾಗಿದೆ ಇದರಿಂದ ವಸುಧೈವ ಕುಟುಂಬಕಮ್ ಎಂಬ ವಿಶ್ವಪ್ರಜ್ಞೆಯು ಬೆಳೆಯುತ್ತದೆ" ಎಂದು ಹೇಳಿದರು. ರಕ್ತದಾನ ಮಾಡಿದ ಮಹನೀಯರಿಗೆ ಪ್ರಮಾಣ ಪತ್ರವನ್ನು ನೀಡಲಾಯಿತು. ಕರ್ನಾಟಕ ರಾಜ್ಯ ಔಷಧ ವ್ಯಾಪಾರಿಗಳ ಸಂಘವು ರಾಜ್ಯಾದ್ಯಂತ ನಡೆದಿರುವ ಕಾರ್ಯಕ್ರಮಗಳ ಉಸ್ತುವಾರಿಯನ್ನು ವಹಿಸಿತ್ತು.

ಡಾ. ಎಂ.ಬಿ. ಗೊಂಗಡಶೆಟ್ಟಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಂಘದ ಕಾರ್ಯದರ್ಶಿ ಬಂಡುರಾವ್ ಕಟ್ಟಿ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ರಕ್ತದಾನದ ಅಗತ್ಯವನ್ನು ಸಭೆಗೆ ತಿಳಿಸಿದರು. ಗೋಪಾಲ ಢಗೆ ಅವರು ಪ್ರಾರ್ಥನೆ ಹಾಡಿದರು, ಗುರುದತ್ತ ಗುಳೇದ ವಂದನಾರ್ಪಣೆ ಮಾಡಿದರು, ಮಹಾಂತೇಶ ಹಳ್ಳೂರ ನಿರೂಪಣೆ ಮಾಡಿದರು. ಸಮಾರಂಭದಲ್ಲಿ ಶಿವಣ್ಣ ಅಕ್ಕಿ, ಅನ್ನದಾನಿ ಹಾದಿಮನಿ, ಶರಣಬಸಪ್ಪ ಗಣಾಚಾರಿ, ಪ್ರಭು ಬೀಳಗಿ ಮುಂತಾದವರು ಉಪಸ್ಥಿತರಿದ್ದರು.

## ಮಹಿಳಾ ಮತ್ತು ಮಕ್ಕಳ ಕಳ್ಳ ಸಾಗಣೆ ತಡೆಗಟ್ಟಲು ಸುರಕ್ಷಿತ ಗ್ರಾಮ ಕಾರ್ಯಕ್ರಮ



**ಕೊಲ್ಹಾರ :** ಸುರಕ್ಷಿತ ಗ್ರಾಮ ಕಾರ್ಯಕ್ರಮ ಸೋಮವಾರ ಕುಮಾರೇಶ್ವರ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ವಿಜಯಪುರ ಹಾಗೂ ಮೈ ಚಾಯ್ಸ್ ಫೌಂಡೇಶನ್ ರೆಡ್ ಅಲರ್ಟ್ ಹೈದರಾಬಾದ್ ಇವರ ಸಯೋಗದಲ್ಲಿ ಪಟ್ಟಣದ ಸರ್ಕಾರಿ ಕನ್ನಡ ಗಂಡು ಮಕ್ಕಳ ಮಾದರಿಯ ಪ್ರಾಥಮಿಕ ಶಾಲೆಯಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಕುಮಾರೇಶ್ವರ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷರಾದ ರಮೇಶ ಎಚ್ ಸಂಗಾತಿ ಮಾತನಾಡಿ ನಾವು ತಂತ್ರಜ್ಞಾನದಿಂದ ಎಷ್ಟೇ ಮುಂದುವರೆದರು ನಮ್ಮನ್ನು ನಾವು ಮೈಮರೆಯುತ್ತಿದ್ದೇವೆ. ಈ ಮಾಯಾ ಜಗತ್ತಿಗೆ ನಾವು ಬಲೆಯಾಗಿದ್ದೇವೆ ಪ್ರತಿ ನಿಮಿಷಕ್ಕೆ ಒಂದು ಮಗು ಕಾಣೆಸುತ್ತದೆ ಹಾಗೆ ಪ್ರತಿ ನಿಮಿಷಕ್ಕೂ ಒಂದು ಹೆಣ್ಣು ಮಗು ಅತ್ಯಾಚಾರಕ್ಕೆ ಒಳಪಡುತ್ತದೆ ನಿಯಂತ್ರಿಸಲು ಜಾರಿಯಲ್ಲಿರುವ ಕಾನೂನುಗಳು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬರುತ್ತಿಲ್ಲ ದೇಶದಲ್ಲಿ ಮಕ್ಕಳ ಹಕ್ಕುಗಳ ಪರಿಸ್ಥಿತಿ ಚಿಂತಾ ಜನಕವಾಗಿದೆ

ಹೀಗಾಗಿ ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಮಕ್ಕಳನ್ನು ದೌರ್ಜನದಿಂದ ರಕ್ಷಿಸುವ ನಿಟ್ಟಿನಲ್ಲಿ ಸರಕಾರ ಮತ್ತು ಸಂಘ ಸಂಸ್ಥೆಗಳು ಸಮನ್ವಯದಿಂದ ಕೆಲಸ ಮಾಡಬೇಕು ಎಂದರು.

ಯಾರಾದರೂ ಅಪರಿಚಿತರು ತೊಂದರೆ ಕೊಟ್ಟರೆ ಮಕ್ಕಳ ಸಹಾಯವನ್ನು 1098 ತುರ್ತು ಸೇವಾಗಾಗಿ 112 ಗೆ ಕರೆ ಮಾಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ತಹಶೀಲ್ದಾರ ಎಸ್ ಎಸ್ ನಾಯಕಲಮಠ ಮಾತನಾಡಿ ಬಾಲಕಾರ್ಮಿಕ ಮಕ್ಕಳನ್ನು ವಿಶೇಷವಾಗಿ ಅವರು ಶಾಲೆಯಲ್ಲಿ ಇರಬೇಕಾದ ಸಮಯದಲ್ಲಿ ಕೆಲಸ ಮಾಡಲು ಕೋರುವುದು ಅಥವಾ ಒತ್ತಾಯ ಮಾಡುವುದು ಮಕ್ಕಳು ಶಾಲೆಯಲ್ಲಿ ಇರಬೇಕಾದ ಸಮಯದಲ್ಲಿ ಅವರನ್ನು ಕೆಲಸಕ್ಕೆ ನಡೆಸುವುದು ಕಾನೂನು ವಿರುದ್ಧ ಅಪರಾಧ ಎಂದು ಹೇಳಿದರು ಮಕ್ಕಳಿಗೆ ಶಿಕ್ಷಣವನ್ನು ಕೊಡಿ ಅವರನ್ನು ಸಮಾಜದಲ್ಲಿ ಒಬ್ಬ ಒಳ್ಳೆಯ ವ್ಯಕ್ತಿಯನ್ನಾಗಿ ಮಾಡಬೇಕಾದ ನಮ್ಮೆಲ್ಲರ ಕರ್ತವ್ಯ ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾಧಿಕಾರಿಗಳು ಯಶೋದ ಜೋಶಿ ಮಾತನಾಡಿ ಬಾಲ್ಯ ವಿವಾಹ ಮಾಡುವುದು ಕಾನೂನಿನ ಪ್ರಕಾರ ಅಪರಾಧ 18 ವಯಸ್ಸಿಗಿಂತ ಮುಂಚಿತವಾಗಿ ವಿವಾಹ ಮಾಡುವುದು ತಪ್ಪು ಮತ್ತು ಕಾನೂನುಬಾಹಿರವಾಗಿದೆ ಆದ್ದರಿಂದ ನಾವೆಲ್ಲರೂ ಒಟ್ಟಾಗಿ ಬಾಲ್ಯ ವಿವಾಹ ಮತ್ತು ಮಕ್ಕಳ ಕಳ್ಳ ಸಾಗಣಿಕೆ ಅನ್ನು ನಿಲ್ಲಿಸಬೇಕು ಎಂದು ಹೇಳಿದರು.

ಅತಿಥಿಗಳಾಗಿ ಮುಖ್ಯಾಧಿಕಾರಿ ಉಮೇಶ ಚಲವಾದಿ.ಎಎಸ್ಐ ಎಸ್ ಎಸ್ ಬಡಿಗೇರ,ಮುಖ್ಯಶಿಕ್ಷಕ ಎಂ ಕೆ ಚೌಧ್ರಿ,ಡಾ. ಅಬ್ದುಲ್ ಸರ್, ಭೀಮಪ್ಪ ಬೀಳಗಿ, ಮಲ್ಲಪ್ಪ ಗಣಿ,ಸಿದ್ದಪ್ಪ ಗಣಿ, ರೂಪ ಗಿಡ್ಡಪ್ಪಗೋಳ, ಅಶೋಕ ಕೊಲ್ಹಾರ ಉಪಸ್ಥಿತರಿದ್ದರು.

## ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಿಗೆ ಲಾಡ್ಲೇಮಶಾಕ ನಾಯ್ಕೋಡಿ ಅವರಿಂದ ಸನ್ಮಾನ



**ಮುದ್ದೇಬಿಹಾಳ :** ಕಾಂಗ್ರೆಸ್ ಮುಖಂಡ ಸಹಕಾರಿ ಧುರೀಣ ಶ್ರೀ ಲಾಡ್ಲೇಮಶಾಕ ನಾಯ್ಕೋಡಿ ಮಾಜಿ ಅಧ್ಯಕ್ಷರು ಅಮಾನತ್ ಅಲ್ಪಸಂಖ್ಯಾತರ ಪತ್ತಿನ ಸೌಹಾರ್ದ ಸಹಕಾರಿ ಬ್ಯಾಂಕ ಇವರು ತಮ್ಮ ಗೃಹ ಕಚೇರಿ ಯಲ್ಲಿ ಶ್ರೀಮತಿ ನಾಗಲಕ್ಷ್ಮಿ ಚೌಧರಿ ಅಧ್ಯಕ್ಷರು ಕರ್ನಾಟಕ ರಾಜ್ಯ ಮಹಿಳಾ ಆಯೋಗ ಬೆಂಗಳೂರು ಇವರನ್ನು ಇಂದು ತಮ್ಮ ಮನೆಯಲ್ಲಿ ಮುಂಜಾನೆ 9–45 ಅಲ್ಪೋಪಹಾರ ಮಾಡಿದ ನಂತರ ಶ್ರೀಮತಿ ನಾಗಲಕ್ಷ್ಮಿ ಚೌಧರಿ ಅವರಿಗೆ ಸನ್ಮಾನ ಮಾಡಿ ಗೌರವಿಸಲಾಯಿತು ಈ ಸಂದರ್ಭದಲ್ಲಿ ಮಾಂತೇಶ ಬೂದಾಳಮಠ,ಎಂ ಬಿ ಜಕ್ಕೇರಾಳ, ಅಜೀಜ್ ಢವಳಗಿ, ಇನ್ನೂ ಅನೇಕ ಯುವಕ ಮುಖಂಡರು, ಮತ್ತು ನಮ್ಮ ವಾರ್ಡಿನ ಅನೇಕ ಜನರು ಮತ್ತು ನಮ್ಮ ಕುಟುಂಬದ ಸದಸ್ಯರು ಮತ್ತು ಆಪ್ತ ಗೆಳೆಯರು ಉಪಸ್ಥಿತರಿದ್ದರು.

**ವರದಿ ಖುಷ್ಬರ್ ಚೋಪ್ದಾರ್ ಮುದ್ದೇಬಿಹಾಳ 8971964730**

## ಸಿಕ್ಯಾಬ್ ಶಿಕ್ಷಣ ಸಂಸ್ಥೆಗೆ ಎಂಎಲ್‌ಸಿ ಬಿಲ್ಕಿಸ್ ಬಾನು ಭೇಟಿ, ಪ್ರಶಂಸೆ



**ವಿಜಯಪುರ :** ವಿಧಾನ ಪರಿಷತ್ ಸದಸ್ಯೆ ಬಿಲ್ಕೀಸ್ ಬಾನು ಶನಿವಾರ ನಗರದ ಸಿಕ್ಯಾಬ್ ಸಂಸ್ಥೆಗೆ ಭೇಟಿ ನೀಡಿ ಶಿಕ್ಷಣ ಸಂಸ್ಥೆಯ ಶಾಲಾ ಕಾಲೇಜುಗಳ ಶೈಕ್ಷಣಿಕ ಚಟುವಟಿಕೆಗಳನ್ನು ಹಾಗೂ ಸಾಧನೆಗಳನ್ನು ಶ್ಲಾಘಿಸಿದರು.

ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಎಸ್.ಎ. ಪುಣೇಕರ್ ಅವರ ಪರಿಶ್ರಮ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಕೌಶಲ್ಯ ಬೆಳೆಸಿಕೊಳ್ಳಬೇಕೆಂದು ಹೇಳಿದರು. ಅದರಲ್ಲೂ ಅಲ್ಪಸಂಖ್ಯಾತ ವಿದ್ಯಾರ್ಥಿನಿಯರು ಶೈಕ್ಷಣಿಕವಾಗಿ ಮುಂದುವರೆಯುತ್ತಿರುವ ಬೆಳವಣಿಗೆಯು ಸಮಾಜದ ಅಭಿವೃದ್ಧಿಗೆ ಪೂರಕವಾಗಿದೆ ಎಂದು ಅಭಿಪ್ರಾಯ ಪಟ್ಟರು. ಸರ್ಕಾರದಿಂದಾಗುವ ಶೈಕ್ಷಣಿಕ ಯೋಜನೆಗಳು ಸೌಲಭ್ಯಗಳನ್ನು ನೀಡುವ ಬಗ್ಗೆ ಭರವಸೆ ನೀಡಿದರು.

ಸಭೆಯಲ್ಲಿ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ಪದಾಧಿಕಾರಿಗಳು ಮತ್ತು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಎಸ್.ಎ. ಪುಣೇಕರ, ನಿರ್ದೇಶಕ ಸಲಾವುದ್ದೀನ್ ಪುಣೇಕರ, ಸಂಸ್ಥೆಯ ಕಾರ್ಯದರ್ಶಿ ಎ.ಎಸ್. ಪಾಟೀಲ, ಇಂಜಿನಿಯರಿಂಗ್ ಕಾಲೇಜ್ ಪ್ರಾಂಶುಪಾಲ ಸೈಯದ್ ಅಬ್ಬಾಸ್ ಅಲಿ, ಪಿಯು ಕಾಲೇಜುಗಳಡೀನ್‌ಎನ್.ಎಸ್.ಭೂಸನೂರ,ಎ.ಆರ್. ಎಸ್ ಇನಾಮದಾರ ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ಕೆ.ಯಡಹಳ್ಳಿ, ಪಿಯು ಕಾಲೇಜಿನ ಪ್ರಾಂಶುಪಾಲ ಡಾ. ಸುಜಾತಾ ಕಟ್ಟಿಮನಿ, ಕೆ.ಪಿ. ಸಾದತ್, ಎಂ.ಎಂ. ಗುರಡಿ, ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ವೈಹಿದಾ ಖಾನಂ, ಡಾ. ಹಾಜರಾಪರವೀನ್, ಪ್ರೊ, ತಬಸುಮ್ ಗುಳೇದಗುಡ್ಡ, ಉಜ್ಮಾ ಸತ್ತಿಕರ್, ಡಾ. ಅಬ್ಬಾಸ್‌ಅಲಿ ದುಂಡಸಿ, ಡಾ. ಎಸ್.ಎ. ಖಾದರಿ, ಡಾ. ಅಸ್ಲಂ ಕರ್ಜಗಿ, ಶಬನಮ್ ಖತೀಬ, ಖ್ವಾಜಾ ಖಾನ್, ಸಂಸ್ಥೆ ಸಿಬ್ಬಂದಿಗಳು ಉಪಸ್ಥಿತರಿದ್ದರು. ಡಾ. ಎಚ್.ಕೆ. ಯಡಹಳ್ಳಿ ಸ್ವಾಗತಿಸಿ ಅತಿಥಿಗಳನ್ನು ಪರಿಚಯಿಸಿದರು. ವಿಧಾನ ಪರಿಷತ್ ಸದಸ್ಯ ಬಿಲ್ಕಿಸ್ ಬಾನು ಅವರಿಗೆ ಆಡಳಿತ ಮಂಡಳಿಯಿಂದ ಸನ್ಮಾನಿಸಲಾಯಿತು.

## ಇಟ್ಟಿಗೆ ಭಟ್ಟಿಯಲ್ಲಿ ಹಲ್ಲೆಗೊಳಗಾದ ನೊಂದ ಕಾರ್ಮಿಕರಿಗೆ ಸಾಂತ್ವನ

**ವಿಜಯಪುರ :** ನಗರದ ಹೊರವಲಯದ ಮಹಾತ್ಮ ಗಾಂಧಿ ನಗರ ಬಡಾವಣೆಯ ಸ್ಟಾರ್ ಚೌಕ ಹತ್ತಿರ ಹೊಟ್ಟೆಪಾಡಿಗಾಗಿ ಇಟ್ಟಗೆ ಭಟ್ಟಿಯಲ್ಲಿ ಕೆಲಸಕ್ಕೆ ಬಂದ ಕಾರ್ಮಿಕರ ಅಮಾನುಷವಾಗಿ ಹಲ್ಲೆ ನಡೆಸಿದ ಘಟನೆಯನ್ನು ಸಾಮಾಜಿಕ ಕಾರ್ಯಕರ್ತ ಹಾಗೂ ನ್ಯಾಯವಾದಿ ದಾನೇಶ ಅವಟಿ ಅವರು ತೀವ್ರವಾಗಿ ಖಂಡಿಸಿದ್ದಾರೆ.

ಜಮಖಂಡಿ ತಾಲೂಕಿನ ಚಿಕ್ಕಲಕಿ ಕ್ರಾಸ್‌ನ ಸದಾಶಿವ ಮಾದರ, ಉಮೇಶ ಮಾದರ, ಸದಾಶಿವ ಬಬಲಾದಿ ಅವರನ್ನು ಮರ್‍ನಾಲ್ಕು ದಿನ ಕೂಡಿ ಹಾಕಿ ಅಮಾನವೀಯವಾಗಿ ಥಳಿಸಿರುವುದು ಅತ್ಯಂತ ಹೀನ ಕೃತ್ಯವಾಗಿದ್ದು, ನಾಗರಿಕ ಸಮಾಜ ತಲೆತಗ್ಗಿಸುವಂತಾಗಿದೆ? ಎಂದು ಹೇಳಿದ್ದಾರೆ.

ನಗರದ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮೂರು ಜನರಿಗೆ ಹಣ್ಣು ಹಂಪಲು ವಿತರಿಸಿ ಸಾಂತ್ವನ ಹೇಳಿ ಮಾತನಾಡಿದರು. ನಗರದಲ್ಲಿ ದಿನಂಪ್ರತಿ ಕಳ್ಳತನ, ದರೋಡೆ, ದೌರ್ಜನ್ಯಗಳು ಹೆಚ್ಚಾಗುತ್ತಿದ್ದು, ಗೂಂಡಾ ಸಾಮ್ರಾಜ್ಯ ನೆಲೆಯೂರಿದಂತಾಗಿದೆ. ಕಾರಣ ನಾಗರಿಕರು ಭಯಭೀತರಾಗಿದ್ದಾರೆ. ಇಂಥಹ ದುಷ್ಕೃತ್ಯ ಎಸಗುವವರನ್ನು ಬಂಧಿಸಿ ಕೂಡಲೇ ಉಗ್ರ ಶಿಕ್ಷೆಗೆ ಒಳಪಡಿಸಬೇಕೆಂದು ಅವಟಿ ಆಗ್ರಹಿಸಿದ್ದಾರೆ.

ಇದೇ ಸಂದರ್ಭದಲ್ಲಿ ನ್ಯಾಯವಾದಿ ಬಾಬು ಹಿಪ್ಪರಗಿ ಮಾತನಾಡಿ, ಇದೊಂದು ಅಮಾನವೀಯ ಕೃತ್ಯವಾಗಿದ್ದು, ಕಾನೂನಿನ ಸುವ್ಯವಸ್ಥೆ ಹದಗೆಟ್ಟಂತಾದಗಿದೆ. ಹತ್ತಾರು ಜನ ಸೇರಿ ಕೈ ಕಾಲು ಕಟ್ಟಿ ಪ್ರಾಣಾಪಾಯ ಆಗುವಂತೆ ಥಳಿಸಿದ ಹೀನ ಮನಸ್ಸಿನ ವ್ಯಕ್ತಿಗಳಿಗೆ ತಕ್ಕ ಪಾಠ ಕಲಿಸಬೇಕು. ಇಂತಹ ವ್ಯಕ್ತಿಗಳಿಗೆ ನಾಗರಿಕ ಸಮಾಜದಲ್ಲಿ ಹೇಗೆ ಬದುಕಬೇಕೆಂಬುದು ತಿಳಿದುಕೊಳ್ಳಲು ಉಗ್ರ ಶಿಕ್ಷೆಗೆ ಒಳಪಡಿಸಬೇಕೆಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಪ್ರಕಾಶ ರಜಪೂತ ಪೆಟ್ಟು ತಿಂದವರಿಗೆ ಸಾಂತ್ವನ ವ್ಯಕ್ತಪಡಿಸಿ ಕಾರ್ಮಿಕ ಇಲಾಖೆಯಿಂದ ಹಾಗೂ ಸರ್ಕಾರದಿಂದ ಸಂತ್ರಸ್ಥರಿಗೆ ಸೂಕ್ತ ಪರಿಹಾರ ಒದಗಿಸುವುದಲ್ಲದೇ ದಷ?ಕೃತ್ಯ ಎಸಗಿದವರನ್ನು ಕಠಿಣ ಶಿಕ್ಷೆಗೆ ಒಳಪಡಿಸಲು ಒತ್ತಾಯಿಸಿದರು.

## ತೊಗರಿ ಖರೀದಿಗೆ ರಾಜ್ಯ ಸರ್ಕಾರದಿಂದ 140 ಕೋಟಿ ರೂ. ಕ್ವಿಂಟಾಲ್‌ಗೆ ಹೆಚ್ಚುವರಿ 450 ರೂ. ಘೋಷಣೆ/400ಕ್ಕೂ ಅಧಿಕ ಖರೀದಿ ಕೇಂದ್ರ

**ವಿಜಯಪುರ :** ಬೆಂಬಲ ಬೆಲೆಯಲ್ಲಿ ತೊಗರಿ ಖರೀದಿಗೆ ರಾಜ್ಯ ಸರ್ಕಾರ ಕ್ವಿಂಟಾಲ್‌ಗೆ ಹೆಚ್ಚುವರಿ 450 ರೂ. ನೀಡಲು ನಿರ್ಧರಿಸಿದ್ದು, ಈ ಉದ್ದೇಶಕ್ಕೆ 140 ಕೋಟಿ ರೂ. ಒದಗಿಸಲಾಗುವುದು ಎಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಘೋಷಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಸೋಮವಾರ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಮುಖಂಡರೊಂದಿಗೆ ಅವರ ಬೇಡಿಕೆಗಳ ಬಗ್ಗೆ ಚರ್ಚಿಸಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಮಾತನಾಡಿದ ಸಚಿವರು, ಒಟ್ಟು ಪ್ರತಿ ಕ್ರಿಂಟಾಲ್‌ಗೆ ಎಂಟು ಸಾವಿರ ರೂ. ಬೆಂಬಲ ಬೆಲೆ ನೀಡಲಾಗುವುದು ಎಂದು ತಿಳಿಸಿದರು.



ಕೇಂದ್ರ ಸರ್ಕಾರದ ನಫೆಡ್ ಖರೀದಿ ಏಜನ್ಸಿಯಾಗಿದ್ದು, ದಾಖಲೆಗಳನ್ನು ಸಕಾಲಕ್ಕೆ ಒದಗಿಸದ ಕಾರಣ ಖರೀದಿ ಪ್ರಕ್ರಿಯೆ ವಿಳಂಬವಾಗಿದೆ. ರಾಜ್ಯಾದ್ಯಂತ 400ಕ್ಕೂ ಅಧಿಕ ಖರೀದಿ ಕೇಂದ್ರಗಳನ್ನು ಆರಂಭಿಸಲಾಗಿದ್ದು, ತೊಗರಿ ಬೆಳೆಗಾರರು ಆತಂಕ ಪಡುವ ಅಗತ್ಯವಿಲ್ಲ ಎಂದು ಹೇಳಿದರು.

ಇದೇ ಮೊದಲ ಬಾರಿಗೆ 8000 ರೂ. ಧಾರಣಿಯಲ್ಲಿ ತೊಗರಿ ಖರೀದಿ ಮಾಡಲಾಗುತ್ತಿದೆ. ಇದುವರೆಗೆ 5800 ರೂ. ಧಾರಣಿಯಲ್ಲಿ ಖರೀದಿ ಮಾಡಲಾಗುತ್ತಿತ್ತು.

ಬೀದರ್ ಜಿಲ್ಲೆಯಿಂದ ಚಿತ್ರದುರ್ಗ ಜಿಲ್ಲೆಯವರೆಗೆ ತೊಗರಿ ಬೆಳೆಯಲಾಗುತ್ತಿದ್ದು, ರೈತರು ಬೆಂಬಲ ಬೆಲೆ ಹೆಚ್ಚಳ ಮಾಡಬೇಕು ಎಂಬ ಬೇಡಿಕೆ ಇಟ್ಟಿದ್ದರು. ರೈತರ ಬೇಡಿಕೆಗೆ ರಾಜ್ಯ ಸರ್ಕಾರ ಸ್ಪಂದಿಸಿ ಕ್ವಿಂಟಾಲ್‌ಗೆ 450 ರೂ. ಹೆಚ್ಚುವರಿ ಕೊಡುವ ನಿರ್ಧಾರ ಕೈಗೊಂಡಿದೆ ಎಂದು ವಿವರಿಸಿದರು.

**ಆಂಧ್ರದ ಜೋಳಕ್ಕೆ ತಡೆ:** ಆಂಧ್ರಪ್ರದೇಶದ ಹೈಬ್ರಿಡ್ ಜೋಳವನ್ನು ರಾಜ್ಯದ ಬೆಂಬಲ ಬೆಲೆ ಖರೀದಿ ಕೇಂದ್ರಗಳಲ್ಲಿ ಮಾರಾಟ ಮಾಡಿರುವುದು ಗಮನಕ್ಕೆ ಬಂದಿದ್ದು, ಆಂಧ್ರದ ಜೋಳಕ್ಕೆ ಕಡಿವಾಣ ಹಾಕಲಾಗುವುದು ಎಂದು ಹೇಳಿದರು.

ಹೈಬ್ರಿಡ್ ಜೋಳಕ್ಕೆ 3370 ರೂ. ಹಾಗೂ ಮಾಲದಂಡಿ ಜೋಳಕ್ಕೆ 3400 ರೂ. ಬೆಂಬಲ ಬೆಲೆ ಘೋಷಣೆ ಮಾಡಲಾಗಿದ್ದು, ಒಟ್ಟು ಐದು ಲಕ್ಷ ಕ್ವಿಂಟಾಲ್ ಖರೀದಿ ಮಾಡಲಾಗುವುದು. ಇದುವರೆಗೆ ಕೆಲವೇ ಕೆಲವು ಜಿಲ್ಲೆಗಳ ರೈತರು ಮಾತ್ರ ಖರೀದಿ ಕೇಂದ್ರಗಳಲ್ಲಿ ಮಾರಾಟ ಮಾಡುತ್ತಿದ್ದರು. ಈ ಬಾರಿ ಜೋಳ ಬೆಳೆಯುವ ಎಲ್ಲ ಜಿಲ್ಲೆಗಳಿಗೂ ಖರೀದಿ ಪ್ರಮಾಣ ಹಂಚಿಕೆ ಮಾಡಲಾಗುವುದು ಎಂದರು.

ಕಳಪೆ ಬಿತ್ತನೆ ಬೀಜ ಹಾಗೂ ಕ್ರಿಮಿನಾಶಕ ಔಷಧಿ ಮಾರಾಟದ ಬಗ್ಗೆ ದೂರುಗಳು ಬಂದಿದ್ದು, ಅಂಥ ಮಾರಾಟಗಾರರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದು ತಿಳಿಸಿದರು.

## ಬೆಂಗಳೂರು ಎಂ.ಜಿ ರಸ್ತೆ ಮೀರಿಸುವ ರಸ್ತೆಗಳು ವಿಜಯಪುರದಲ್ಲಿ: ಶಾಸಕ ಯತ್ನಾಳ 10 ಕೋಟಿ ಅನುದಾನದಲ್ಲಿ ಸಿಸಿ ರಸ್ತೆ ಕಾಮಗಾರಿಗೆ ಭೂಮಿಪೂಜೆ

**ವಿಜಯಪುರ :** ನೀವುಗಳು ನೀಡಿರುವ ಒಂದು ಮತ ಇಡೀ ವಿಜಯಪುರ ನಗರದ ಚಿತ್ರಣವನ್ನೇ ಬದಲಿಸಿ, ದೇಶದಲ್ಲಿ ಅತ್ಯುತ್ತಮ ಗಾಳಿ ಬೀಸುವ ನಗರ ಪಟ್ಟಿಯಲ್ಲಿ 3ನೇ ಸ್ಥಾನಕ್ಕೆ ಬರಲು ಸಾಧ್ಯವಾಗಿದೆ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದ ಶ್ರೀ 1008 ಸಹಸ್ರಫಣಿ ಪಾರ್ಶ್ವನಾಥ ಜೈನ್ ಮಂದಿರ ಹತ್ತಿರ ಭಾನುವಾರ ಲೋಕೋಪಯೋಗಿ ಇಲಾಖೆಯ ಎಸ್.ಎಚ್.ಡಿ.ಪಿ ಯೋಜನೆಯಡಿ ಮಂಜೂರಿಸಿದ ರೂ.10 ಕೋಟಿ ಅನುದಾನದಲ್ಲಿ ಸೋಲಾಪುರ ರಸ್ತೆಯಿಂದ ಇಟ್ಟಂಗಿಹಾಳ ಹೋಗುವ ರಿಂಗ್ ರಸ್ತೆ ವರೆಗೆ ಸಿಸಿ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಬೆಂಗಳೂರಿನಲ್ಲಿ ಇರುವ ಎಂ.ಜಿ ರಸ್ತೆ ಮೀರಿಸುವಂತೆ ನಗರದ ರಸ್ತೆಗಳು ಅಭಿವೃದ್ಧಿಗೊಂಡಿವೆ. ರಸ್ತೆಗಳ ಅಗಲೀಕರಣ



ವೇಳೆ ಹಲವರು ಬೈದರು. ನಂತರ ಅವರೇ ಬಂದು ಥ್ಯಾಂಕ್ಸ್ ಹೇಳಿದ್ದಾರೆ. ಅದಕ್ಕೆ ಕಾರಣ ನಗರದಲ್ಲಿರುವ ರಸ್ತೆಗಳನ್ನು ವಿಶಾಲವಾಗಿ ಹಾಗೂ ಗುಣಮಟ್ಟದಿಂದ ಅಭಿವೃದ್ಧಿಗೊಳಿಸಿದಕ್ಕೆ ಸುಗಮ ಸಂಚಾರ, ಧೂಳುಮುಕ್ತ ಜೊತೆಗೆ ನಿವೇಶನಗಳ ಬೆಲೆಯೂ ದುಪ್ಪಟ್ಟಾಗಿವೆ ಎಂದರು.

ವಿದೇಶ ಸೇರಿ ಬೇರೆ ಬೇರೆ ಕಡೆಗಳಲ್ಲಿ ನೆಲೆಸಿರುವ ನಮ್ಮವರು 8–10 ವರ್ಷಗಳ ನಂತರ ವಿಜಯಪುರಕ್ಕೆ ಬಂದರೆ, ಇದು ನಮ್ಮ ನಗರವೇ ಎಂದು ಕೆಲ ಕ್ಷಣ ಗೊಂದಲದಲ್ಲಿರುತ್ತಾರೆ. ಅಷ್ಟೊಂದು ಅಭಿವೃದ್ಧಿಯಲ್ಲಿ ಬದಲಾವಣೆ ಆಗಿದೆ. ಅದೇ ರೀತಿ ಸಹಸ್ರಫಣಿ ಪಾರ್ಶ್ವನಾಥ ಜೈನ್ ಮಂದಿರ ರಸ್ತೆಯೂ ಅಭಿವೃದ್ಧಿಗೊಳ್ಳಲಿದೆ. ಇನ್ನೊಂದು ರಿಂಗ್ ರೋಡ ಸಹ ಮಾಡಲಾಗುವುದು ಎಂದು ತಿಳಿಸಿದರು.

ವಕ್ಫ್ ಕಾನೂನು ಎಷ್ಟು ಕೆಟ್ಟದ್ದಾಗಿದೆ ಎಂಬುವುದು ಬಹಳಷ್ಟು ಅಧಿಕಾರಿಗಳಿಗೂ ಗೊತ್ತಿಲ್ಲ. ಅದರ ಬಗ್ಗೆ ಯಾರು ಹೆದರಬೇಡಿ, ಯಾರೊಬ್ಬರಿಗೂ ಯಾವುದೇ ಸಮಸ್ಯೆ ಆಗಲು ನಾವು ಬಿಡುವುದಿಲ್ಲ. ರಾಜ್ಯದಲ್ಲಿ ಸಂಚರಿಸಿ ವಾಸ್ತವ ತಿಳಿದುಕೊಂಡು, ಎರಡು ಬಾರಿ ದೆಹಲಿಗೆ ತೆರಳಿ ಸುಮಾರು 2500 ಪುಟಗಳ ವರದಿ ಸಲ್ಲಿಸಿದ್ದೇವೆ. ತಿದ್ದುಪಡಿ ಬದಲಾಗಿ, ಸಂಪೂರ್ಣ ವಕ್ಫ್ ರದ್ದು ಮಾಡುವಂತೆಯೂ ಮನವಿ ಮಾಡಿಕೊಂಡಿದ್ದೇವೆ. ಎಲ್ಲರೂ ಒಂದಾಗಿ, ಯಾರು ಏನು ಮಾಡುವುದಿಲ್ಲ ಎಂದು ಸಲಹೆ ನೀಡಿದರು.

ಪ್ರಜಾತಂತ್ರದ ಜಾತ್ರೆ ಅಂದರೆ ಮತದಾನ. ಎಲ್ಲರೂ ಜಾತ್ರೆಗಳಿಗೆ ಹೋದಂತೆ ಮತದಾನ ಬಂದಾಗ ಮನೆಯಲ್ಲಿ ಕುಳಿತುಕೊಳ್ಳದೆ, ಮತ ಚಲಾಯಿಸಲು ಹೋಗಿ ಒಳ್ಳೆಯವರನ್ನು ಆಯ್ಕೆ ಮಾಡಿದರೆ ಹೀಗೆ ಅಭಿವೃದ್ಧಿ ಕಾಣಲು ಸಾಧ್ಯವಾಗುತ್ತದೆ ಎಂದರು.

ಮುಖಂಡರಾದ ಸಾಯಬಣ್ಣ ಬೋವಿ, ಶೀತಲಕುಮಾರ ಓಗಿ, ಮಧುಸೂಧನ ಯಲಗುದ್ರಿ, ವಿ.ಸಿ.ಕುಲಕರ್ಣಿ, ಪ್ರಕಾಶ ಗೊಂಗಡಿ, ಸುನೀಲ ಉಳ್ಳಾಗಡ್ಡಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ವೇಮನರ ಚಿಂತನೆ ಬದುಕಿಗೆ ಮಾರ್ಗದರ್ಶಿ: ಸಂತೋಷ ಬಂಡೆ



**ವಿಜಯಪುರ :** ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಸಮಾಜ ಸುಧಾರಕರಾಗಿ, ಜನರಾಡುವ ಭಾಷೆಯಲ್ಲಿ ಬೋಧನೆ ಮಾಡಿದ ಜನಪರ ನಿಲುವಿನ ಮಹಾಯೋಗಿ ವೇಮನ ಅವರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ಭಾನುವಾರ ಇಂಡಿ ತಾಲೂಕಿನ ಹಿರೇರೂಗಿ ಗ್ರಾಮದ ಯುಬಿಎಸ್ ಶಾಲೆಯಲ್ಲಿ ಮಹಾಯೋಗಿ ವೇಮನರ ಜಯಂತಿ ಆಚರಣೆಯನ್ನು ಉದ್ದೇಶಿಸಿ ಮಾತನಾಡಿದರು.

ಕನ್ನಡದಲ್ಲಿ ಸರ್ವಜ್ಞರಿದ್ದಂತೆ, ತೆಲುಗಿನಲ್ಲಿ ವೇಮನ. ಯೋಗ ವಿಚಾರದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದ ಅವರ ಕವಿತೆಗಳಲ್ಲಿ ಸಾಮಾಜಿಕ, ನೈತಿಕ, ವಿಡಂಬನಾತ್ಮಕ ಸಂಗತಿಗಳಿವೆ. ಸಮಾಜ ಚಿಂತಕರಾಗಿ ಅವರು ಮಾನವ ಕುಲದ ಏಳಿಗೆಗಾಗಿ ಶ್ರಮಿಸಿದವರು. ಅವರ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಮ್ಮ ಬದುಕು ಸಾರ್ಥಕವಾಗುತ್ತದೆ ಎಂದು ಹೇಳಿದರು.

ಶಿಕ್ಷಕಿ ಎಸ್.ಪಿ. ಪೂಜಾರಿ ಮಾತನಾಡಿ, ಸಾಮಾನ್ಯ ಜ್ಞಾನದ ಮೂಲಕವೇ ಡಾಂಭಿಕತೆ, ಧರ್ಮ–ಅಧರ್ಮ, ಜ್ಞಾನ–ಅಜ್ಞಾನ ಸೇರಿದಂತೆ ಜೀವನದಲ್ಲಿ ಸಾರ್ಥಕತೆಯನ್ನು ಕಂಡುಕೊಳ್ಳುವ ಪದ್ಯಗಳನ್ನು ರಚಿಸುವ ಮೂಲಕ ತೆಲುಗಿನ ಸರ್ವಜ್ಞನೆನಿಸಿಕೊಂಡಿದ್ದ ವೇಮನರ ವಿಚಾರಗಳು ಇಂದಿಗೂ ಮಹತ್ವ ಪಡೆದಿವೆ ಎಂದು ಹೇಳಿದರು. ಮುಖ್ಯ ಶಿಕ್ಷಕ ಎಸ್.ಎಸ್. ಅರಬ ಅಧ್ಯಕ್ಷತೆ ವಹಿಸಿದ್ದರು. ಅತಿಥಿ ಶಿಕ್ಷಕಿ ಅಲ್ಫಿಯಾ ಅಂಗಡಿ, ಸ್ಥಳೀಯರಾದ ಬೇಗಂ ಮುಲ್ಲಾ, ಕಮಲಾಬಾಯಿ ದಳವಾಯಿ ಸೇರಿದಂತೆ ಮಕ್ಕಳು ಉಪಸ್ಥಿತರಿದ್ದರು.

## ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಿ

**ಬಸವನ ಬಾಗೇವಾಡಿ :** ಪಟ್ಟಣದಲ್ಲಿ ದರೋಡೆಕೋರರ ಹಾವಳಿಗಿಂತಲೂ ಊಹಾಪೋಹ ಗಾಳಿಸುದ್ದಿ ಎಬ್ಬಿಸುತ್ತಿರುವರಿಂದ ಪೊಲೀಸ್ ಇಲಾಖೆಯವರಿಗೆ ರಾತ್ರಿ ಕೆಲಸ ನಿರ್ವಹಿಸಲು ತೊಂದರೆ ಆಗುತ್ತಿದೆ. ಅದಕ್ಕೆ ಅದನ್ನು ಬಿಟ್ಟು ಪೊಲೀಸ್ ಇಲಾಖೆಯವರಿಗೆ ಸಹಕಾರ ನೀಡುವಂತೆ ಡಿವೈಎಸ್‌ಪಿ ಬಲ್ಲಪ್ಪ ನಂದಗಾವಿ ಹೇಳಿದರು. ಸ್ಥಳೀಯ ಪೊಲೀಸ್ ಠಾಣಾ ಆವರಣದಲ್ಲಿ ಸೋಮವಾರ ಸಂಜೆ ಸಾರ್ವಜನಿಕರಿಗೆ ಸಭೆ ಕರೆಯಲಾಗಿತ್ತು ದರೋಡೆ ಕೋರರ ಹಾಗೂ ಕಳ್ಳರ ಬಗ್ಗೆ ಜಾಗೃತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು ಕಳೆದ ವಾರ ಪಟ್ಟಣದಲ್ಲಿ ದರೋಡೆ ನಡೆದಿದೆ. ವಿಜಯಪುರ ನಗರದಲ್ಲಿ ಶೂಟೌಟ್ ಪ್ರಕರಣ ನಡೆದಿದೆ ಈ ಕುರಿತಾಗಿ ಸಮಗ್ರ ತನಿಖೆಯು ನಡೆಯುತ್ತಿದೆ ಎಂದರು. ಕಳೆದ 4 ದಿನಗಳಿಂದ ಬಸವನ ಬಾಗೇವಾಡಿ ಪಟ್ಟಣದಲ್ಲಿ ಕೆಲ ಯುವಕರು ಸೈಕಲ್ ಮೋಟಾರ್ ಗಳ ಮೇಲೆ ಬಡಿಗೆ ಹಿಡಿದುಕೊಂಡು ರಾತ್ರಿ ವೇಳೆ ಸಂಚರಿಸುತ್ತಿರುವುದು ನಾಗರಿಕರನ್ನು ಭಯಭೀತರನ್ನಾಗಿ ಮಾಡಿದೆ ಅದಕ್ಕೆ ಪ್ರೇರಿತವಾಗಿ ಯುವಕರು ರಾತ್ರಿ ವೇಳೆ ಸೈಕಲ್ ಮೋಟಾರ್ ಗಳ ಮೇಲೆ ಸಂಚರಿಸುವುದನ್ನು ನಿಲ್ಲಿಸಬೇಕು ಪೊಲೀಸ್ ಇಲಾಖೆಯವರು ತಂಡ ರಚನೆ ಮಾಡಿ ರಾತ್ರಿಗಸ್ತುತಿರುಗುತ್ತಿದ್ದಾರೆ ಹಾಗೇನಾದರೂ ಸಂಶಯ ಬಂದರೆ ತಕ್ಷಣವೇ ಪೊಲೀಸ್ ಇಲಾಖೆಗೆ ದೂರವಾಣಿ



ಮೂಲಕ ತಿಳಿಸಬೇಕು ಬಸವನ ಬಾಗೇವಾಡಿಯಲ್ಲಿ ಸಿಸಿ ಕ್ಯಾಮೆರಾ ಕೂಡಿಸುವಂತೆ ಎಲ್ಲರ ಬೇಡಿಕೆಗೂ ನಾವು ಕೂಡ ತಿಳಿಸಿದ್ದರಿಂದ ಅದಕ್ಕೆ ಸ್ಪಂದಿಸಿ ಜಿಲ್ಲಾಧಿಕಾರಿಗಳು 10 ಲಕ್ಷ ಬಿಡುಗಡೆಗೊಳಿಸಿದ್ದಾರೆ ತಕ್ಷಣವೇ ನಗರದ ಪ್ರಮುಖ ರಸ್ತೆಗಳಲ್ಲಿ ಸಿಸಿ ಕ್ಯಾಮೆರಾ ಗಳನ್ನು ಕೂಡಿಸಲಾಗುವುದು ಅದರಂತೆ ದರೋಡೆಕೋರರು ಮುಖ್ಯರಸ್ತೆ ಯಲ್ಲಿ ಬರುವುದಿಲ್ಲ ಅದಕ್ಕಾಗಿ 30 ಲಕ್ಷ 40 ಲಕ್ಷ ಕೊಟ್ಟು ಮನೆ ಕಟ್ಟಿಸುವಂಥವರು ಅನುಕೂಲಸ್ಥರು ತಮ್ಮ ಮನೆಗಳ ಮುಂದೆ ಸಿಸಿ ಕ್ಯಾಮೆರಾ ಗಳನ್ನು ರಸ್ತೆ ಕಾಣುವಂತೆ ಕೂಡಿಸಬೇಕೆಂದು ಕೇಳಿಕೊಂಡರು ಇವರಿಂದ ಈಗಿನ ಸಿಸಿ ಕ್ಯಾಮೆರಾ ಗಳು ಸೈರನ್ ಹೊಡೆಯುತ್ತವೆ ಅಪರಿಚಿತರು ಎಂದು ಗೊತ್ತಾದ ತಕ್ಷಣ ಪೊಲೀಸ ಇಲಾಖೆ ತಿಳಿಸಲು ಕೋರಿದರು ಪಟ್ಟಣದಲ್ಲಿ ಡ್ರಿಂಕ್ ಅಂಡ್ ಡ್ರೈವಿಂಗ್ ಬಹಳ ಜನರು ಸಾಯುವುದು ಕಂಡುಬಂದಿದೆ ಕಾರಣ ನಾವು ಆ ಪ್ರಕರಣಗಳನ್ನು ದಾಖಲಿಸುವ ಮೂಲಕ ಯುವಕರು ಎಚ್ಚರವಾಗಲಿ ಎಂಬು ಉದ್ದೇಶದಿಂದ ದಂಡ ಹಾಕುತ್ತೇವೆ ಅದಕ್ಕೆ ಕೆಲವರು ಪ್ರಕರಣ ದಾಖಲ ಮಾಡದಂತೆ ಒತ್ತಾಯ ಮಾಡುವುದು ಸರಿಯಲ್ಲ. ಪಟ್ಟಣದಲ್ಲಿ ಕೆಲವು ಪಾನ್‌ಬೀಡ ಅಂಗಡಿಗಳು ರಾತ್ರಿ ಒಂದರವರೆಗೆ ತೆರೆದಿರುತ್ತವೆ ತಕ್ಷಣವೇ ಅಂತ ಎಲ್ಲಾ ಅಂಗಡಿಕಾರರು ರಾತ್ರಿ ಬೇಗನೆ ಮುಚ್ಚದಿದ್ದರೆ ಕ್ರಮ ಜರುಗಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು ಸಭೆಯಲ್ಲಿ ಗುರುಶಾಂತ್ ದಾಶಾಳ ಮಾತನಾಡಿದರು ಕರವೇ ರಾಜ್ಯ ಸಂಘಟನಾ ಕಾರ್ಯದರ್ಶಿ ಅಶೋಕ್ ಹಾರಿವಾಳ ಎಂಜಿ ಆದಿಗೊಂಡ ಡಿಎಸ್‌ಎಸ್ ಮುಖಂಡ ಅರವಿಂದ ಸಾಲವಾಡಗಿ ಬಸಣ್ಣ ದೇಸಾಯಿ ಅಡಿಗೆಮನೆ ಸೇರಿದಂತೆ ಮುಂತಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು ನೂರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಹೆಣ್ಣು ಮಕ್ಕಳು ಸಭೆಯಲ್ಲಿ ಭಾಗವಹಿಸಿದ್ದರು ಸಭೆಯು ಕತ್ತಲಾದ ಪ್ರಯುಕ್ತ ಲೈಟಿಂಗ್ ವ್ಯವಸ್ಥೆ ಇರಲಿಲ್ಲ ಹಾಗೂ ಜನಸಂಖ್ಯೆ ಬಹಳ ಬಂದಿರುವುದರಿಂದ ಹಿಂದಿನ ಜನರಿಗೆ ಮಾತನಾಡುವುದು ಏನು ಕೇಳಿಸುತ್ತಿದ್ದಿಲ್ಲ ಮೈಕ್ ವ್ಯವಸ್ಥೆ ಇರಲಿಲ್ಲ ಎಂದು ಸಾರ್ವಜನಿಕರು ದೂರಿದರು.

## ತಾಲೂಕಾಮಟ್ಟದ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮ ಉದ್ಘಾಟನೆ

### ತಂದೆ ತಾಯಿ ಮಕ್ಕಳಿಗೆ ಉತ್ತಮ ಸಂಸ್ಕಾರ ಕೊಡಲು ನ್ಯಾಯವಾದಿ ಪಾಟೀಲ ಮನವಿ



**ಬಾದಾಮಿ :** ಹೆಚ್ಚಿನ ಸಮಯದಲ್ಲಿ ಮಕ್ಕಳು ಮನೆಯಲ್ಲಿರುವುದರಿಂದತಂದೆತಾಯಿಮಕ್ಕಳಿಗೆಶಿಕ್ಷಣ ಕೊಡುವುದರಿಂದ ಉತ್ತಮ ಸಂಸ್ಕಾರ ಕೊಡಬೇಕು ಎಂದು ನ್ಯಾಯವಾದಿ ಎಸ್.ಎಸ್.ಪಾಟೀಲ ಹೇಳಿದರು. ಅವರು ಶನಿವಾರ ನಗರದ ಎಸ್.ವಿ.ಪಿ. ವಿದ್ಯಾ ಸಂಸ್ಥೆಯ ಬಸವಭವನದಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ದಿಯೋಜನೆಬಿ.ಸಿ.ಟ್ರಸ್ಟ್(ರಿ)ವತಿಯಿಂದ ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ "ಮಕ್ಕಳ ಶಿಕ್ಷಣದಲ್ಲಿ ಪೋಷಕರ ಪಾತ್ರ" ಎಂಬ ವಿಷಯ ಕುರಿತು ತಾಲೂಕಾಮಟ್ಟದ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಜನಜಾಗೃತಿ ವೇದಿಕೆಯ ಅಧ್ಯಕ್ಷ ಡಾ.ಎಂ.ಜಿ.ಕಿತ್ತಲಿ ಅಧ್ಯಕ್ಷತೆ ವಹಿಸಿದ್ದರು. ಯೋಜನೆಯ ಪ್ರಾದೇಶಿಕ ನಿರ್ದೇಶಕ ಚಂದ್ರಶೇಖರ ಜೆ. ಮಾತನಾಡಿದರು. ಸಾಹಿತಿ ಜಯಶ್ರೀ ಭಂಡಾರಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮಾತನಾಡಿದರು. ವೇದಿಕೆಯ ಮೇಲೆ ಪುರಸಭೆ ಸದಸ್ಯರಾದ ರಾಜಮಹ್ಮದ ಬಾಗವಾನ, ಮುಖಂಡರಾದ ಎಂ.ಬಿ.ಹಂಗರಗಿ, ಮಹೇಶ ಹೊಸಗೌಡ್ರ, ಜಯಶ್ರೀ ಹಿರೇಮನಿ, ಮಹಾಂತೇಶ ನಾಗಶೆಟ್ಟಿ ಹಾಜರಿದ್ದರು. ನಂತರ ಜ್ಞಾನವಿಕಾಸ ಕೇಂದ್ರದ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ತಾಲೂಕಾ ಯೋಜನಾಧಿಕಾರಿ ಮಹಾಂತೇಶ ಎಸ್. ಪ್ರಾಸ್ತಾವಿಕವಾಗಿ ಮಾತನಾಡಿದರು.

## ಶಾಸಕರ ಆಪ್ತರ ಹಾಗೂ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿಗಳ ಮೇಲೆ ಸುಳ್ಳು ಆರೋಪ

### ಬ್ಯಾಟರಿ ರಿಚಾರ್ಜ ಮಾಡಿಸಲು ಆಸ್ಪತ್ರೆಯಿಂದ ತೆಗೆದುಕೊಂಡು ಹೋಗಲಾಗಿದೆ: ಡಿ.ಎಚ್.ಓ.ಮಂಜುನಾಥ ಸ್ಪಷ್ಟನೆ

**ಬಾದಾಮಿ :** ತಾಲೂಕಾಸ್ಪತ್ರೆಯಲ್ಲಿನ 10 ವರ್ಷಗಳ ಹಿಂದೆ ಇ–ಆಸ್ಪತ್ರೆಯಡಿ ಸರಬರಾಜು ಆಗಿರುವ 12 ಬ್ಯಾಟರಿಗಳ ಕಾರ್ಯಕ್ಷಮತೆಯನ್ನು ಪರೀಕ್ಷಿಸಲು ಹಾಗೂ ರಿಚಾರ್ಜ ಮಾಡಿಸಲು ಅಂಬುಲೆನ್ಸ್ ಮೂಲಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಗಳ ಅನುಮತಿ ಪಡೆದು ಹೊರಗಡೆ ತೆಗೆದುಕೊಂಡು ಹೋಗಿದ್ದಾರೆ ಇಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ(ಡಿ.ಎಚ್.ಒ) ಮಂಜುನಾಥ ಡಿ.ಎನ್.ಸ್ಪಷ್ಟಪಡಿಸಿದರು.

ಅವರು ಸೋಮವಾರ ತಾಲೂಕಾಸ್ಪತ್ರೆಯ ಸಭಾಭವನದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಆಸ್ಪತ್ರೆಯ ಆಡಳಿತಾಧಿಕಾರಿಗಳ ಸಮ್ಮುಖದಲ್ಲಿ ಅಧಿಕಾರಿಗಳ ಅನುಮತಿ ಪಡೆದು ಇ–ಆಸ್ಪತ್ರೆಯಡಿ 10 ವರ್ಷಗಳ ಹಿಂದೆ ಸರಬರಾಜು ಆಗಿರುವ 12 ಬ್ಯಾಟರಿಗಳನ್ನು ಬ್ಯಾಟರಿ ಅಂಗಡಿಗೆ ಅಂಬುಲೆನ್ಸ್ ಮೂಲಕ ತೆಗೆದುಕೊಂಡು ಹೋಗಿದ್ದಾರೆ. ಅಂಬುಲೆನ್ಸ ನಲ್ಲಿ ಬ್ಯಾಟರಿ ತೆಗೆದುಕೊಂಡು ಹೋಗಿರುವುದು ತಪ್ಪು. ಅದಕ್ಕಾಗಿ ಬೇರೆ ವಾಹನ ವ್ಯವಸ್ಥೆಗೊಳಿಸಬೇಕಿತ್ತು ಎಂದರು.



ಈ ಹಿಂದೆ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರು ಭೇಟಿ ನೀಡಿ ಕೆಲವು ನ್ಯೂನ್ಯತೆಗಳನ್ನು ಸರಿಪಡಿಸಲು ತಿಳಿಸಿದ್ದರು.ನಾನು ಕಳೆದ ಗುರುವಾರ ಭೇಟಿ ನೀಡಿ ಪರಿಶೀಲನೆ ಮಾಡಿ ಸಲಹೆ ಸೂಚನೆಗಳನ್ನು ನೀಡಿದ್ದೆ. ಆಸ್ಪತ್ರೆಯ ಒಳ ಹಾಗೂ ಹೊರ ಆವರಣದ ಸ್ವಚ್ಚತೆ, ಕೆಲವು ಅನುಪಯುಕ್ತ ವಸ್ತುಗಳನ್ನು ನಿಯಮಾನುಸಾರ ಸಲಹಾ ಸಮಿತಿ ಸದಸ್ಯರ ಗಮನಕ್ಕೆ ತಂದು ಪಟ್ಟಿ ಮಾಡಿ ಸರಿಪಡಿಸಬೇಕು.

ಕೆಲವು ಅನುಪಯುಕ್ತ ವಸ್ತುಗಳನ್ನು ವಿಲೇವಾರಿ ಮಾಡಬೇಕು ಎಂದು ಸೂಚಿಸಿದ್ದೆ. ಜನರೇಟರ್ ಸಮಸ್ಯೆ ಚಾರ್ಜೆಬಲ್ ಲೈಟ್ಸ ಅಳವಡಿಸಲಾಗಿದೆ. ಉಪಯೋಗಿಸದ ಹನ್ನೆರಡು ಬ್ಯಾಟರಿಗಳಲ್ಲಿ 6 ಬ್ಯಾಟರಿ ಸರಿ ಇದ್ದು ಉಳಿದ 6 ಬ್ಯಾಟರಿಗಳನ್ನು 3 ದಿನಗಳ ಕಾಲ ಚಾರ್ಜ ಮಾಡಲು ಇಟ್ಟಿದ್ದಾರೆ.

ಆಸ್ಪತ್ರೆಯ ಯಾವುದೇ ವಸ್ತುಗಳನ್ನು ಯಾರೂ ದುರುದ್ದೇಶದಿಂದ ತೆಗೆದುಕೊಂಡು ಹೋಗಿಲ್ಲ. ಸಾಮಾಜಿಕ ಜಾಲ ತಾಣ, ಯು ಟ್ಯೂಬ್ ನಲ್ಲಿ ಪ್ರಸಾರವಾದ ಸುದ್ದಿ ಸತ್ಯಕ್ಕೆ ದೂರವಾದುದು. ಇದರಲ್ಲಿ ಶಾಸಕರ ಆಪ್ತರ ಹಾಗೂ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿಗಳ ಮೇಲೆ ಸುಳ್ಳು ಆರೋಪ ಮಾಡಲಾಗಿದೆ, ಇದರಲ್ಲಿ ಯಾವುದೇ ರೀತಿಯ ಅವ್ಯವಹಾರವಾಗಿಲ್ಲ ಆಸ್ಪತ್ರೆ ಅಭಿವೃದ್ದಿಗೆ ಎಲ್ಲರೂ ಶ್ರಮಿಸುತ್ತಿದ್ದಾರೆ ಆಸ್ಪತ್ರೆಯ ಹೊರರೋಗಿಗಳ ಅನುಕೂಲಕ್ಕಾಗಿ ಆಸ್ಪತ್ರೆಯ ಹೊರಗಡೆ ಎರಡು ಶೌಚಾಲಯ ಸರಿ ಮಾಡಲಾಗಿದೆ. ಮೇಲಗಡೆ ಕುಡಿಯುವ ನೀರಿನ ಟ್ಯಾಂಕ್ ಸ್ಥಳಾಂತರಿಸಲು ತಿಳಿಸಲಾಗಿದೆ, ನಿಯಮಾನುಸಾರ ಸ್ನಾನಗೃಹ, ಲಿಕೇಜ್ ಎಸ್ಟಿಮೇಟ್ ಮಾಡಲು ಇಂಜಿನಿಯರಿಗೆ ತಿಳಿಸಲಾಗಿದೆ.

ಪ್ರತಿ ಶನಿವಾರ ಎಲ್ಲ ಸಿಬ್ಬಂದಿಗಳು ಸೇರಿ ಒಂದು ಗಂಟೆ ಸ್ವಚ್ಚತೆ ಮಾಡಲು ತಿಳಿಸಲಾಗಿದೆ. ಪ್ರತಿ ವಾರ ಸ್ವಚ್ಚತೆ ಕಾರ್ಯ ಮಾಡಬೇಕು ಎಂದರು

ಪತ್ರಿಕಾಗೋಷ್ಠಿಯಲ್ಲಿ ತಾಲೂಕಾ ಆರೋಗ್ಯಾಧಿಕಾರಿ ಡಾ.ಎಂ.ಬಿ.ಪಾಟೀಲ, ಸಲಹಾ ಸಮಿತಿಯ ಸದಸ್ಯರಾದ ಅಶೋಕ ಕೋಟನಕರ, ಪ್ರಕಾಶ ನಡಮನಿ, ಮುಖ್ಯ ವೈದ್ಯಾಧಿಕಾರಿ ಡಾ.ವಿರೇಶ ಶೆಟ್ಟರ, ಪುರಸಭೆಯ ಅಧ್ಯಕ್ಷ ಪಾಂಡು ಕಟ್ಟೀಮನಿ, ಸೇರಿದಂತೆ ಇತರರು ಹಾಜರಿದ್ದರು.

# ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ಮಿನಿ ತಾರಾಲಯ ಶೀಘ್ರದಲ್ಲಿ ಲೋಕಾರ್ಪಣೆ ಭರವಸೆ

## ಮಕ್ಕಳಲ್ಲಿ ಖಗೋಳದಲ್ಲಿ ಆಸಕ್ತಿ ಹೆಚ್ಚಿಸಲು ವಿಜ್ಞಾನ ಕೇಂದ್ರಗಳ ಸ್ಥಾಪನೆ: ಸಚಿವ ಎನ್.ಎಸ್.ಭೋಸರಾಜು

**ಬೆಳಗಾವಿ :** ರಾಜ್ಯ ಸರ್ಕಾರ ಮಕ್ಕಳಲ್ಲಿ ವಿಜ್ಞಾನ, ತಂತ್ರಜ್ಞಾನದ ಕುರಿತು ಆಸಕ್ತಿ ಹಾಗೂ ಹೆಚ್ಚಿನ ಜ್ಞಾನ ಒದಗಿಸುವ ಹಿನ್ನಲೆಯಲ್ಲಿ ರಾಜ್ಯದಲ್ಲಿ ವಿವಿಧ ಭಾಗಗಳಲ್ಲಿ ವಿಜ್ಞಾನ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಹಿಡಕಲ್ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ಮಿನಿ ತಾರಾಲಯ ಕಾಮಗಾರಿಯನ್ನು ಶೀಘ್ರವೇ ಪೂರ್ಣಗೊಳಿಸಲು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ತಿಳಿಸಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ ಜಲಸಂಪನ್ಮೂಲ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ

ಹಿಡಕಲ್ ಉದ್ಯಾನಕಾಶಿಯಲ್ಲಿ ಸೋಮವಾರ(ಜ.20) ರಾಜಾ ಲಖಮಗೌಡ ಉದ್ಯಾನಕಾಶಿ ಅಭಿವೃದ್ಧಿ ಯೋಜನೆಯಡಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ಮಿನಿ ತಾರಾಲಯ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ರಾಜ್ಯದಲ್ಲಿ 8 ರಿಂದ 9 ಜಿಲ್ಲೆಗಳಲ್ಲಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪನೆಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ವಿಜ್ಞಾನದ ಬಗ್ಗೆ ಆಸಕ್ತಿ ಬೆಳೆಸುವುದರ ಜೊತೆಯಲ್ಲೇ, ವಿಜ್ಞಾನ ಅಧ್ಯಯನ ಹಾಗೂ ಸಂಶೋಧನೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ರಾಜ್ಯ ಸರಕಾರವು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ ಎಂದು ಹೇಳಿದರು.

ಬೆಂಗಳೂರಿನ ಹೆಬ್ಬಾಳದಲ್ಲಿ ಏಷಿಯಾ ಖಂಡದಲ್ಲಿ ನಂಬರ್ ಒನ್ ಮಾದರಿಯಲ್ಲಿ ಸೈನ್ಸ್ ಗ್ಯಾಲರಿ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. ರಾಜ್ಯದ ನಾಲ್ಕು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ತಾರಾಲಯ ನಿರ್ಮಾಣಕ್ಕೆ ಅನುದಾನ ಒದಗಿಸಲಾಗಿದೆ. ಮಂಗಳೂರ ಜಿಲ್ಲೆಯ ಪಿಲಕುಳಿಯಲ್ಲಿ 350 ಎಕರೆ ಪ್ರದೇಶದಲ್ಲಿ ದೇಶದಲ್ಲಿಯೇ ಅತಿ ದೊಡ್ಡ ತಾರಾಲಯವನ್ನು ಸ್ಥಾಪಿಸಲಾಗಿದೆ. ಸರಕಾರದ ವತಿಯಿಂದ ರಾಜ್ಯದ 833 ವಸತಿ ಶಾಲೆಗಳಿಗೆ ಟೆಲಿಸ್ಕೋಪ್




ವಿತರಣೆ ಹಾಗೂ ಲ್ಯಾಬರೋಟರಿಗಳನ್ನು ಸ್ಥಾಪಿಸಲಾಗುವದು. ಇಂದು ತಾರಾಲಯ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಸಲಾದ ಕಾಮಗಾರಿಯನ್ನು ಒಂದು ವರ್ಷದೊಳಗೆ ಪೂರ್ಣಗೊಳಿಸದ್ದಲ್ಲಿ ಈ ತಾರಾಲಯವನ್ನು ಇನ್ನೂ ಮೇಲ್ದರ್ಜೆಗೆ ಏರಿಸಲು ಕ್ರಮವಹಿಸಲಾಗುವುದು ಎಂದು ಸಚಿವರಾದ ಎನ್.ಎಸ್.ಭೋಸರಾಜು ಅವರು ಹೇಳಿದರು.

ಲೋಕೋಪಯೋಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರು ಮಾತನಾಡಿ ವಿಜ್ಞಾನ ಕೇಂದ್ರದ ನಿರ್ಮಾಣಕ್ಕೆ ಮೊದಲ ಹಂತದಲ್ಲಿ ಈಗಾಗಲೇ 13 ಕೋಟಿ ವೆಚ್ಚದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಈ ಭಾಗದ ವಿದ್ಯಾರ್ಥಿಗಳಿಗೆ ತಾರಾಲಯ ಉಪಯೋಗವಾಗಲಿದೆ ಎಂದರು.

ಜಿಲ್ಲೆಯಲ್ಲಿ ಪ್ರವಾಸೊದ್ಯಮಕ್ಕೆ ಉತ್ತೇಜನ ನೀಡುವ ಹಾಗೂ ಪ್ರವಾಸಿಗರಿಗೆ ಅನುಕೂಲವಾಗುವಂತೆ ಪ್ರವಾಸಿ ಸರ್ಕಿಟ್ ನಿರ್ಮಿಸಲು ಗೋಕಾಕ ಫಾಲ್ಸ್, ಬೆಳಗಾವಿಯ ರಾಣಿ ಚನ್ನಮ್ಮ ಮೃಗಾಲಯ ಹಾಗೂ ಹಿಡಕಲ್ ಡ್ಯಾಂ ಯೋಜನೆಯೊಂದಿಗೆ ಪ್ರವಾಸಿ ಸರ್ಕಿಟ್ ನಿರ್ಮಿಸುವ ಯೋಜನೆ ಸರಕಾರದ್ದಾಗಿದೆ.

ಹಿಡಕಲ್ ಡ್ಯಾಂ ಹಿನ್ನೀರಿನಲ್ಲಿ ಜಲಕ್ರೀಡೆಗಳಿಗೂ ಪ್ರಾಶಸ್ತ್ಯವಾಗಿದ್ದು ಈ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗುವುದು.

ಪ್ರೇಕ್ಷಕರನ್ನು ಸೆಳೆಯುವ ಉದ್ದೇಶದಿಂದ ಜಿಲ್ಲೆಯ ವಿವಿಧೆಡೆ ಬಹಳಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಗೊಳಗಿದೆ. ಆದಷ್ಟು ಬೇಗ ವಿದ್ಯಾರ್ಥಿಗಳಿಗೆ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ಮಿನಿ ತಾರಾಲಯ ಶೀಘ್ರದಲ್ಲಿ ಲೋಕಾರ್ಪಣೆಗೊಳ್ಳಲಿದೆ ಎಂದು ಲೋಕೋಪಯೋಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರು ತಿಳಿಸಿದರು.

ಹುಕ್ಕೇರಿ ಶಾಸಕ ನಿಖಿಲ್ ಕತ್ತಿ ಅವರು ಮಾತನಾಡಿ, ಬೆಳಗಾವಿ ಜಿಲ್ಲೆಯಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಮೊದಲ ಯೋಜನೆ ಇದಾಗಿದೆ. ನೀರಾವರಿ ಇಲಾಖೆಯಿಂದ 35 ಎಂ.ಐ ಟ್ಯಾಂಕ್, ಹನಿ ನೀರಾವರಿ, 19 ಕೆರೆಗಳ ತುಂಬುವ ಯೋಜನೆ ಸೇರಿದಂತೆ ಹುಕ್ಕೇರಿ ತಾಲೂಕಿನ ಅಭಿವೃದ್ಧಿಗೆ 30 ಕೋಟಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ಚಾಲನೆಯಲ್ಲಿವೆ ಎಂದು ಮಾಹಿತಿ ನೀಡಿದರು.

ಹುಕ್ಕೇರಿ ತಹಶೀಲ್ದಾರ್ ಮಂಜುಳಾ ನಾಯಕ, ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಳಗಾವಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ಬಿ.ಆರ್ ರಾಠೋಡ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಲ್ಲಿಕಾರ್ಜುನ್ ಕಲಾದಗಿ, ನೀರಾವರಿ ಇಲಾಖೆ ಅಧಿಕಾರಿಗಳು ಸೇರಿದಂತೆ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಕಬ್ಬು ಹಾನಿಗೆ ಪರಿಹಾರ ನೀಡಲು ನಿಧಿ ಸ್ಥಾಪನೆ

## ಈ ವರ್ಷದಿಂದ ಪ್ರತಿ ವರ್ಷ 50 ಲಕ್ಷ ರೂ. ನಿಧಿ; ಕಬ್ಬು ಅಭಿವೃದ್ಧಿ ಸಚಿವ ಶಿವಾನಂದ ಪಾಟೀಲ ಭರವಸೆ

**ಬೆಳಗಾವಿ:**(ವಿಜಯಪುರ)ಅಗ್ನಿದುರಂತದಲ್ಲಿ ಸಂಭವಿಸುವ ಕಬ್ಬಿನ ಹಾನಿಗೆ ಪರಿಹಾರ ನೀಡಲು ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯಿಂದ ನಿಧಿ ಸ್ಥಾಪಿಸಲಿದ್ದು, ಈ ವರ್ಷದಿಂದಲೇ 50 ಲಕ್ಷ ರೂ. ತೆಗೆದಿರಿಸಲಾಗುವುದು ಎಂದು ಸಕ್ಕರೆ ಮತ್ತು ಕಬ್ಬು ಅಭಿವೃದ್ಧಿ ಸಚಿವ ಶಿವಾನಂದ ಪಾಟೀಲ ಘೋಷಣೆ ಮಾಡಿದರು

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ರಾಜ್ಯಾಧ್ಯಕ್ಷ ಚುನ್ನಪ್ಪ ಪೂಜೇರಿ ನೇತೃತ್ವದ ರೈತ ಮುಖಂಡರೊಂದಿಗೆ ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ಚರ್ಚಿಸಿದ ಸಚಿವರು, ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ನೀಡುವ ಪರಿಹಾರ ಅತ್ಯಲ್ಪ ಎಂಬ ಕಾರಣಕ್ಕೆ ನಿಜಲಿಂಗಪ್ಪ ಸಂಸ್ಥೆಯಿಂದಲೂ ಪರಿಹಾರ ನೀಡುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಆರಂಭದಲ್ಲಿ ಗರಿಷ್ಠ ಐದು ಎಕರೆ ಮಿತಿಯಲ್ಲಿ ಪರಿಹಾರ ನೀಡಲಿದ್ದು, ನಂತರ ಈ ಪರಿಹಾರ ಯೋಜನೆಯನ್ನು ವಿಸ್ತರಣೆ ಮಾಡುವ ಬಗ್ಗೆ ಚಿಂತನೆ ಮಾಡಲಾಗುವುದು. ವಿದ್ಯುತ್ ಷಾರ್ಟ್ ಸರ್ಕ್ಯೂಟ್ ಮತ್ತಿತರ



ಕಾರಣಗಳಿಂದ ಕಬ್ಬು ಹಾನಿಗೀಡಾದರೂ ಸಕ್ಕರೆ ಕಾರ್ಖಾನೆಗಳು ಈ ಕಬ್ಬನ್ನು ನುರಿಸಲಿವೆ. ಆದರೂ ಸರ್ಕಾರ ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಪರಿಹಾರ ನೀಡುವ ನಿರ್ಧಾರ ಕೈಗೊಂಡಿದೆ ಎಂದು ತಿಳಿಸಿದರು.

**ಬಹುಮಾನದ ಮೊತ್ತ ಹೆಚ್ಚಳ:**

ತೂಕದಲ್ಲಿ ವಂಚನೆ ಮಾಡುವ ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿ ವಿರುದ್ಧ ಸೂಕ್ತ ದಾಖಲೆಗಳೊಂದಿಗೆ ದೂರು ನೀಡುವ ರೈತರಿಗೆ ಒಂದು ಲಕ್ಷ ರೂ. ನಗದು ಬಹುಮಾನ ನೀಡಲಾಗುವುದು ಎಂದು ಬೆಳಗಾವಿ ಅಧಿವೇಶನದ ವೇಳೆ ಘೋಷಣೆ ಮಾಡಲಾಗಿತ್ತು.ಈ ಬಹುಮಾನದ ಮೊತ್ತವನ್ನು 2.5 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದ್ದು, ದೂರು ನೀಡುವ ಕಬ್ಬು ಬೆಳೆಗಾರರಿಗೆ ಯಾವುದೇ ಸಮಸ್ಯೆಯಾಗದಂತೆ ಸರ್ಕಾರ ಜವಾಬ್ದಾರಿ ತೆಗೆದುಕೊಳ್ಳಲಿದೆ. ಅವರ ಕಬ್ಬನ್ನು ನುರಿಸುವ ಹೊಣೆಯನ್ನೂ ಸರ್ಕಾರ ಹೊರಲಿದೆ ಎಂದು ಭರವಸೆ ನೀಡಿದರು.

ರಾಜ್ಯದಲ್ಲಿಒಟ್ಟು80ಸಕ್ಕರೆಕಾರ್ಖಾನೆಗಳಿದ್ದು, ಅವುಗಳಲ್ಲಿ 72 ಕಾರ್ಖಾನೆಗಳಲ್ಲಿ ಹಳೆ ಪದ್ಧತಿಯ ಅನಲಾಗ್ ಯಂತ್ರಗಳ ಬದಲಿಗೆ ಡಿಜಿಟಲ್ ತೂಕದ ಯಂತ್ರಗಳನ್ನು ಹಾಕಲಾಗಿದೆ. ಐದು ಕಾರ್ಖಾನೆಗಳ ಮಾಲೀಕರು ನ್ಯಾಯಾಲಯಕ್ಕೆ ಹೋಗಿರುವುದರಿಂದ ವಿಳಂಭವಾಗಿದೆ. ಇತರ ಕಾರ್ಖಾನೆಗಳಲ್ಲಿ ಡಿಜಿಟಲ್ ತೂಕದ ಯಂತ್ರ ಅಳವಡಿಕೆ ಪ್ರಗತಿಯಲ್ಲಿದೆ.

ಬೆಳಗಾವಿಯಲ್ಲಿ ಮೂರು, ಬಾಗಲಕೋಟ ಜಿಲ್ಲೆಯಲ್ಲಿ ಎರಡು ಸೇರಿದಂತೆ ರಾಜ್ಯಾದ್ಯಂತ ಎಪಿಎಂಸಿಯಿಂದ 12 ಡಿಜಿಟಲ್ ತೂಕದ ಯಂತ್ರಗಳನ್ನು ಹಾಕಲಿದ್ದು, ರೈತ ಸಂಘಗಳು ಮುಂದೆ ಬಂದರೆ ನಿರ್ವಹಣೆ ಜವಾಬ್ದಾರಿಯನ್ನು ನೀಡಲಾಗುವುದು. ತೂಕ ಮತ್ತು ಅಳತೆ ನಮ್ಮ ಇಲಾಖೆ ವ್ಯಾಪ್ತಿಗೊಳಪಡದಿದ್ದರೂ ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಈ ನಿರ್ಧಾರ ಮಾಡಲಾಗಿದೆ.

ಎಫ್ಆರ್ಪಿ ದರ ಹೆಚ್ಚಳ ಮಾಡುವ ದೃಷ್ಟಿಯಿಂದ 2025-26ನೇ ಸಾಲಿಗೆ ಪ್ರತಿ ಟನ್ಗೆ 4440 ನಿಗಧಿಪಡಿಸುವಂತೆ ರಾಜ್ಯ ಸರ್ಕಾರವೇ ಸ್ವಪ್ರೇರಣೆಯಿಂದ ಸಿಎಸಿಪಿಗೆ ಶಿಫಾರಸ್ಸು ಮಾಡಿದೆ.

ಕಬ್ಬಿನ ಬೆಲೆಯನ್ನು ಕೇಂದ್ರ ಸರ್ಕಾರವೇ ನಿಗದಿಪಡಿಸಲಿದ್ದು, ಇದರಲ್ಲಿ ರಾಜ್ಯ ಸರ್ಕಾರದ ಪಾತ್ರ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

# ಗ್ರಾಮ ಆಡಳಿತ ಕಚೇರಿಯಲ್ಲಿ ಅಂಬಿಗರ ಚೌಡಯ್ಯ ಜಯಂತಿ ಆಚರಣೆ



**ಹಳ್ಳೂರ :** ಗ್ರಾಮ ಆಡಳಿತ ಕಚೇರಿಯಲ್ಲಿ ಶ್ರೀ ಅಂಬಿಗರ ಚೌಡಯ್ಯ ಜಯಂತಿಯನ್ನು ಆಚರಣೆ ಮಾಡಲಾಯಿತು. ಪ್ರಾರಂಭದಲ್ಲಿ ಅಂಬಿಗರ ಚೌಡಯ್ಯ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಪಣೆ ಮಾಡುವದರ ಮೂಲಕ ಆಚರಣೆಯನ್ನು ಮಾಡಲಾಯಿತು. ಈ ಸಮಯದಲ್ಲಿ ಗ್ರಾಮ ಆಡಳಿತ ಅಧಿಕಾರಿ ಸಂಜು ಅಗ್ನೇಪ್ಪಗೋಳ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮುರಿಗೆಪ್ಪ ಮಾಲಗಾರ. ಬಸಯ್ಯ ಮಠಪತಿ. ರಮೇಶ ಸವದಿ.ಲಕ್ಷ್ಮಣ ಪೂಜೇರಿ. ಕೆಂಪಣ್ಣ ಕೌಜಲಗಿ. ವಿದ್ಯಾ ರಡರಟ್ಟಿ. ವತ್ಸಲಾ ಹಿರೇಮಠ. ಲಕ್ಷ್ಮೀ ಲೋಕಣ್ಣವರ.ಯಮನವ್ವ ಶಹಾಪುರ.ಶೋಭಾ ತೇರದಾಳ ಸೇರಿದಂತೆ ಅನೇಕರಿದ್ದರು.

# ನೇರ ದಿಟ್ಟ ನಿಷ್ಠುರವಾದಿ ನಿಜಶರಣ ಅಂಬಿಗರ ಚೌಡಯ್ಯ

ನದಿ, ಹಳ್ಳ-ಕೊಳ್ಳ, ಹೊಳೆಗಳಲ್ಲಿ ದೋಣಿ, ತೆಪ್ಪ ಸಾಗಿಸುವಅಂಬಿಗ ವೃತ್ತಿಯ ಚೌಡಯ್ಯ 11 ರಿಂದ 12ನೇ ಶತಮಾನದ ಸಮಯಕ್ಕೆ ಹೊರ ಹೊಮ್ಮಿದ ವಚನ ಚಳುವಳಿಯ ಪ್ರಮುಖ ವಚನಕಾರನಾಗಿದ್ದಾನೆ. ಅತ್ಯಂತ ನೇರ ನಿಷ್ಠುರ ವೈಚಾರಿಕ ವಚನಗಳ ಮೂಲಕ ಮೂಢನಂಭಿಕೆ, ಡಾಂಭಿಕತನ, ಕಂದಾಚಾರ, ಮುಂತಾದವುಗಳನ್ನು ತೀವ್ರವಾಗಿ ವಿರೋಧಿಸಿದ ಕಟುವಾದ ಶಬ್ದಗಳಲ್ಲಿ ಖಂಡಿಸಿ ನಿಜಶರಣ ಎಂಬ ಪ್ರಸಿದ್ಧಿ ಪಡೆದವನೇ ಅಂಬಿಗರ ಚೌಡಯ್ಯ.

ಸಾಮಾನ್ಯವಾಗಿ ವಚನಕಾರರು ತಮ್ಮ ಆರಾಧ್ಯ ಕುಲದೇವರುಗಳ ಅಂಕಿತನಾಮದ ವಚನ ರಚಿಸಿದ್ದರೇ ಅಂಬಿಗರ ಚೌಡಯ್ಯ ತನ್ನ ಹೆಸರನ್ನೇ ತನ್ನ ಅಂಕಿತನಾಮ ಮಾಡಿಕೊಂಡು ವಿಶಿಷ್ಠ-ವಿಶೇಷ ವಚನಕಾರನಾಗಿ ಅಂಕಿತನಾಮದ ಮೂಲಕವೇ ವೈಚಾರಿಕ ಪ್ರಜ್ಞೆಯನ್ನು ಅಭಿವ್ಯಕ್ತಿಗೊಳಿಸಿದ್ದಾನೆ.

ಅಂಬಿಗ ಎಂಬುವನು ನಂಬಿ ಲೋಲಾಡುವನು, ಅವನನ್ನು ನಂಬಿದರೆ ದಡ ಸೇರಿಸುವನು. ಅದಕ್ಕಾಗಿ ದಾಸರು ಅಂಬಿಗ ನಾ ನಿನ್ನ ನಂಬಿದೆ... ಎಂದು ದಾಸರು ಹಾಡಿ ಹೊಗಳಿದ್ದಾರೆ. ದೋಣಿ ಅಥವಾ ತೆಪ್ಪದಲ್ಲಿ ನದಿ ಹೊಳೆ ದಾಟುವಾಗ ಅಂಬಿಗನ ಮೇಲೆ ನಂಬಿಕೆ ಇಡಬೇಕು ಎಂಬುದು ದಾಸರ ಪದದ ತಾತ್ಪರ್ಯ.

**ಬಡತನಕ್ಕೆ ಉಂಬುವ ಚಿಂತೆ,**
**ಉಂಡರೆ ಉಡುವ ಚಿಂತೆ,**
**ಉಡಲಾರದೆ ಇಡುವ ಚಿಂತೆ,**
**ಇಡಲಾರದೆ ಹೆಂಡಿರ ಚಿಂತೆ,**
**ಹೆಂಡರಾದರೆ ಮಕ್ಕಳ ಚಿಂತೆ,**
**ಮಕ್ಕಳಾದರೆ ಬದುಕುವ ಚಿಂತೆ,**
**ಬದುಕಾದರೆ ಕೇಡಿನ ಚಿಂತೆ,**
**ಕೇಡಾದರೆ ಮರಣದ ಚಿಂತೆ,**

ಇಂತೀ ಹಲವು ಚಿಂತೆಯಲ್ಲಿ ಇಪ್ಪವರನ್ನು ಕಂಡೆನು, ಶಿವಚಿಂತೆ ಇದ್ದವರನೊಬ್ಬರನೂ, ಕಾಣೆನೆಂದಾತ ನಮ್ಮ ಅಂಬಿಗರ ಚೌಡಯ್ಯ...

ಅತಿಯಾದ ಬಡತನವಿರುವವನಿಗೆ ಯಾವಾಗಲೂ ಊಟದ ಚಿಂತೆಯು ಬೆನ್ನು ಹತ್ತಿರುತ್ತದೆ. ಎರಡು ಹೊತ್ತು ಊಟಕ್ಕೆ ಸರಿಯಾಗಿ ಸಿಗುವುದೋ ಅವನಿಗೆ ಉಡುವ ಬಟ್ಟೆಯ ಚಿಂತೆಯು ಬೆನ್ನು ಹತ್ತಿರುತ್ತದೆ. ಊಟ ಹಾಗೂ ಉಡಿಗೆಗಳು ಅಬಾಧಿತವಾಗಿ ದೊರೆತರೆ ಹಣ ಸಂಗ್ರಹಗೊಂಡರೆ ಚಿಂತೆಯು ಬೆನ್ನು ಹತ್ತುವುದು ಶೇಖರಿಸಿದ ಹಣವು ದಿನಗಳೆದಂತೆ ಹೆಚ್ಚಾದ ನಂತರ ಹೆಂಡತಿಯನ್ನು ಮಾಡಿಕೊಳ್ಳಬೇಕೆಂಬ ಚಿಂತೆಯು ಕಾಡತೊಡಗುವುದು. ಮದುವೆ ಮಾಡಿಕೊಂಡು ಹೆಂಡತಿಯು ಬಂದಳೆಂದರೆ ಮಕ್ಕಳ ಚಿಂತೆಯು ಪೀಡಿಸತೊಡಗುವುದು. ನಾಲ್ಕಾರು ಮಕ್ಕಳುಗಳಾದರೆ ಬದುಕಿನ ಬಾಳ್ವೆಯ ಹೊಸ ಚಿಂತೆಯು ಹತ್ತುವುದು. ಅಲ್ಲಿಂದ ಮುಂದೆ ಕೆಡಕಿನ ಹಾಗೂ ಮರಣದ ಚಿಂತೆಗಳು ಬೆಂಬತ್ತುವವು.

ಈ ರೀತಿಯಾಗಿ ಮನುಷ್ಯನು ಒಂದಿಲ್ಲೊಂದು ಬಗೆಯ ಚಿಂತೆಯಲ್ಲಿ ಮಗ್ನನಾಗಿರುವುದು ಕಂಡುಬರುವುದು. ಅಂದರೆ ಮನುಷ್ಯನಿಗೆ ತನಗೆ




ಯಾವುದರ ಕೊರತೆಯಿದೆಯೋ ಅಂಥದು ಬೇಕೆಂದು ಚಿಂತಿಸುವನು. ಜಗತ್ತಿನೊಳಗೆ ಎಲ್ಲಿಬೇಕಲ್ಲಿ ಸಿಗುತ್ತಾನೆ. ಆದರೆ ಸದಾಕಾಲವೂ ಶಿವನ ಚಿಂತೆಯಲ್ಲಿಯೇ ಕಾಲ ಕಳೆಯುತ್ತಿರುವಂಥ ಓರ್ವ ಮಹಾನುಭಾವರೂ ಕೂಡಾ ನನಗೆ ಕಾಣಲಿಲ್ಲ ಎಂದು ಕಳವಳ ವ್ಯಕ್ತಪಡಿಸಿದ್ದಾನೆ.

**ಅಂಬಿಗನು ಜಗದೊಳಗೆ ಇಂಬಿಲೋಲಾಡುವನು**
**ತುಂಬಿದ ಸಾಗರದೊಳಗೆ ನೋಡಯ್ಯ**
**ನಂದ ದೋಣಿಯನೇರಿದಂದಿನ ಹುಟ್ಟ**
**ಕಂಡವರಂದವ ನರಿದಾತ ತೋರಿಸುತ್ತಿದ್ದನು.**
**ಛಂದಗೆಟ್ಟವರೆಲ್ಲಾ ಬಂದೇರಿ ದೋಣಿಯನು**
**ಶಿವನೋಂದೆ ಠಾವಿಗೊಯ್ದಿಳುಹುವೆನೆಂದನಂಬಿಗರ ಚೌಡಯ್ಯ.**

ಎಂದು ಅಂತಹ ಅಂಬಿಗ ನಾನಲ್ಲ ಕೇವಲ ನದಿಯನ್ನುಅಷ್ಟೇ ಅಲ್ಲ ಈ ಅಂಬಿಗನನ್ನು ಶಿವನಂಬಿದರೆ ಸಂಸಾರವೆಂಬ ಭವಸಾಗರವನ್ನೇ ದಾಟಿಸಿ ಜೀವನಕ್ಕೆ ಮುಕ್ತಿ ದೊರಕಿಸಿಕೋಡಬಲ್ಲೆ ಎಂಬ ಆತ್ಮವಿಶ್ವಾಸದ ಸ್ವಾಭಿಮಾನದ ಕಿಡಿತನ್ನ ವಚನದಲ್ಲಿ ಹೊತ್ತಿಸಿದ್ದಾನೆ. ಅಂಬಿಗರ ಚೌಡಯ್ಯನ್ನು ಬಸವಾದಿ ಶಿವ ಶರಣರಲ್ಲಿ ಅತ್ಯಂತ ಪ್ರಭಾವಿತನಾದ ನೇರ ನಡೆ-ನುಡಿಯ ನಿಷ್ಠುರವಾದಿ ನಿಜ ಶರಣ ಆದವನು. ಅಂಬಿಗರ ಚೌಡಯ್ಯ ತನ್ನ ಕುಲ ಕಸುಬಾದ ದೋಣಿ ನಡೆಸುವ ಕಾಯಕವನ್ನು ಕೈಗೊಂಡಿದ್ದಾನೆ. ಶ್ರೇಷ್ಠ ಅನುಭಾವಿ ಸಾಮಾಜಿಕ ಬದಲಾವಣೆಯ ಬಗೆಗೆ ತೀವ್ರ ಕಳಕಳಿಯುಳ್ಳ ಧ್ಯೇಯವಾದಿ. ಅಸತ್ಯ ಅನ್ಯಾಯ ಮೂಢನಂಬಿಕೆ, ಅಂಧ, ವಿಚಾರ ಆಚಾರಗಳನ್ನು ಖಂಡಿಸುವ ನಿಷ್ಠುರವಾದಿ. ಇವಯ ಈತನ ವ್ಯಕ್ತಿತ್ವದ ಮುಖ್ಯಾಂಶಗಳು. ಕೆಳವರ್ಗದ ಶೋಶಣೆಗೆ ಒಳಗಾದ ತನ್ನವರ ಶೋಷಿತ ನೋವಿನ ಪರಿಚಯ ಅವನಿಗೆ ಚೆನ್ನಾಗಿತ್ತು.

ಕಟ್ಟಿದ ಲಿಂಗವನು ಬಿಟ್ಟು, ಬೆಟ್ಟದ ಲಿಂಗಕ್ಕೆ ಹೋಗಿ,
ಹೊಟ್ಟೆಡಿ ಬೀಳುವ ಖೊಟ್ಟಿ ಮೂಳರ ಕಂಡಡೆ,
ಮೆಟ್ಟಿದ ಎಡ ಪಾದರಕ್ಷೆಯ ತಗೊಂಡು
ಲಟಲಟನೆ ಹೊಡೆಯೆಂದಾತ ಅಂಬಿಗರ ಚೌಡಯ್ಯ

ಅಂಬಿಗರ ಚೌಡಯ್ಯನ ಮತ್ತೊಂದು ವಚನದಲ್ಲಿ ಅಂಗದ ಮೇಲಿರುವಂತಹ ಕಟ್ಟಿಕೊಂಡಿರುವ ಲಿಂಗವನ್ನು ಬಿಟ್ಟು ಗುಡ್ಡ ಬೆಟ್ಟದ ಮೇಲೊಂದು ಕಟ್ಟಿಸಿದಂತಹ ಗುಡಿಯೊಳಗಿನ ಲಿಂಗಕ್ಕೆ ಹೊಟ್ಟೆ ಅಡಿಯಾಳಾಗಿ ಉದ್ದಕ್ಕೆ ಬಿದ್ದು ನಮಸ್ಕಾರ ಮಾಡುವವರನ್ನು ಮೂರ್ಖರು ಕಂಡರೆ ಮುಟ್ಠಾಳರೆಂದು ಟೀಕೆ ಮಾಡಿ ಅಂತಹವರನ್ನು ಎಡಗಾಲಿನ ಪಾದರಕ್ಷೆಯಿಂದ ಹೊಡೆಯಂದಾತ ಅಂಬಿಗರ ಚೌಡಯ್ಯ. ಈ ರೀತಿಯಾಗಿ ತನ್ನ ಹರಿತವಾದ ವಚನಗಳೊಂದಿಗೆ ಅತ್ಯಂತ ಕಟುವಾದ ಟೀಕೆಗಳನ್ನು ಮಾಡಿ ಸಮಾಜದಲ್ಲಿ ವೈಚಾರಿಕ ಕ್ರಾಂತಿ ತರಬೇಕೆಂದು ಅತ್ಯಂತ ಪ್ರಯತ್ನವಾದಿಯಾಗಿ ಶಿವಶರಣರ ಕಾಲದಲ್ಲಿ ಅಂಬಿಗರ ಚೌಡಯ್ಯ ಗೋಚರಿಸುತ್ತಾನೆ.

ಕುಲ ಹೀನ ಶಿಷ್ಯಂಗೆ ಅನುಗ್ರಹ ಮಾಡಿ,
ತಿರುಗಿ ಅವನ ಮನೆಯಲ್ಲಿ ಉಣಬಾರದೆಂದು –

**ಅಕ್ಕಿ-ಕಣಕವ ತಕ್ಕೊಂಡು**
**ಹೋಗುವ ಗುರುವಿನ ಕಂಡರೆ**
**ಕೆಡಹಿ ಹಾಕಿ ಮೂಗನೆ ಕೊಯ್ದು**
**ಇಟ್ಟಂಗಿಯ ಕಲ್ಲಿಲೆತಿಕ್ಕಿ**
**ಸಾಸಿವೆ ಹಿಟ್ಟಿನ ತಳಿದು ಮೇಲೆ ಲಿಂಬೆಯ**
**ಹುಳಿ ಹಿಂಡಿ**
**ಪಡುವಣಗಾಳಿಗೆ ಹಿಡಿ ಎಂದಾತ**
**ನಮ್ಮ ಅಂಬಿಗರ ಚೌಡಯ್ಯ.**

ಕುಲಹೀನ ಶಿಷ್ಯನಿಗೆ ಅನುಗ್ರಹಿಸಿಅವನ ಮನೆಯಲ್ಲಿಯೇ ಊಟ ಮಾಡಲು ಇಚ್ಛಿಸದೇ, ಅಕ್ಕಿ ಕಣಕ ಮುಂತಾದವುಗಳನ್ನು ತೆಗೆದುಕೊಂಡು ಹೋಗುವ ಗುರುಗಳನ್ನು ಕಂಡರೆ ನೆಲಕ್ಕೆ ಕೆಡವಿ ಮೂಗು ಕೊಯ್ದು ಆ ಗಾಯದ ಮೇಲೆ ಇಟ್ಟಿಗೆಯಿಂದ ಬಲವಾಗಿ ಉಜ್ಜಿ ಅದರ ಮೇಲೆ ಸಾಸಿವೆ ಹಿಟ್ಟು ಉದುರಿಸಿ ನಿಂಬೆಹಣ್ಣಿನ ಹುಳಿಯನ್ನು ಹಿಂಡಿ ಪಡುವಣ ಗಾಳಿಗೆ ಹಿಡಿದು ಶಿಕ್ಷಿಸಬೇಕೆಂದು ಈ ವಚನದಲ್ಲಿ ಉಗ್ರವಾಗಿ ಆಗ್ರಹಿಸಿದ್ದಾನೆ.

ದೊಡ್ಡ ದೊಡ್ಡ ಶೆಟ್ಟಿಗಳ ಕಂಡು ಅಡ್ಡಗಟ್ಟಿ ಹೋಗಿ ಶರಣಾರ್ಥಿ
ಎಂಬ ಎಡ್ಡುಗಳ್ಳತನಕ್ಕೆ ತಮ್ಮ ಮಠಕ್ಕೆ ಬನ್ನಿ ಹಿರಿಯರೆ ಎಂಬರು
ಹೋಗಿ ಶರಣಾರ್ಥಿ, ಭಕ್ತನೆಂದೊಡೆ ಕೇಳದ ಹಾಗೆ ಅಡ್ಡಮೊರೆಯನಿಕ್ಕಿಕೊಂಡು
ಸುಮ್ಮನೆ ಹೋಗುವ ಹೆಡ್ಡ ಮೊಳರಿಗೆ ದುಡ್ಡೇ ಪ್ರಾಣವಾಯಿತ್ತು
ದುಡ್ಡಸ್ತರ ಕುರುಹನರಿಯದೆ ಮೊಳಪಾದದ ಮೇಲೆ ಹೊಡೆಹೊಡೆಕೊಂಡು
ನಗುತಿರ್ದಾತ ನಮ್ಮ ಅಂಬಿಗರ ಚೌಡಯ್ಯ

ಈ ವಚನವಂತೂ ಮಠ-ಮಾನ್ಯಗಳಲ್ಲಿನಡಾಂಭಿಕತೆ ಹಣವಂತರಿಗೆ ಮಾತ್ರ ಗೌರವಿಸುವ ರೂಢಿಸುವುದನ್ನು ಟೀಕಿಸಿ, ನಿಜ ಸಾಮಾನ್ಯ ಭಕ್ತರನ್ನು ಉಪೇಕ್ಷಿಸುವುದನ್ನು ಖಂಡಿಸುವ ಈ ವಚನವು ಅಂದು-ಇಂದು ಎಂದೆಂದಿಗೂ ಪ್ರಸ್ತುತ ಎನ್ನುವಂತೆ ಕಂಡು ಬರುತ್ತದೆ.

**ಅಂಬಿಗರ ಸಮುದಾಯಗಳ ಹಿನ್ನೆಲೆ :**

ಸಂಸ್ಕೃತಿ ಎಂಬ ಪರಿಕಲ್ಪನೆಯ ಅರ್ಥ ಬದಲಾವಣೆ ಆದಂತೆಯೆ ಸಮುದಾಯಗಳ ಸಂಸ್ಕೃತಿ ಶೋಧ ಮತ್ತು ಚಿಂತನೆಯ ಕೇಂದ್ರಗಳು ಬದಲಾಗುತ್ತಾ ಬಂದಿವೆ. ಧರ್ಮ, ಜಾತಿ, ರಾಷ್ಟ್ರ, ವ್ಯಕ್ತಿ, ಪ್ರವೇಶ, ರಾಜ, ಸಾಹಿತ್ಯ, ಚರಿತ್ರೆ, ಜನಾಂಗ, ಸಮಾಜ, ರಾಜಕೀಯ ಮತ್ತು ಆರ್ಥಿಕತೆ ಸದ್ಯದ ಅಂಬಿಗರ ಸಮುದಾಯಗಳ ಸಂಸ್ಕೃತಿಯ ಚಿಂತನೆಯ ಹಲವು ಮುಖ್ಯ ಕೇಂದ್ರಗಳಾಗಿವೆ.

**ಗಂಗೆ ಆರಾಧಕರಾಗಿ ಅಂಬಿಗರು :**

ನದಿ, ಸಮುದ್ರ, ಹಳ್ಳ ಕೊಳ್ಳಗಳ, ಜಲದ ಮೂಲವಾಗಿ ಬೆಳೆದು ಬಂದ ಅತ್ಯಂತ ಪುರಾತನ ಬುಟಕಟ್ಟು ಜನಾಂಗ ಅಂಬಿಗರ ಸಮುದಾಯದ್ದು. ದೋಣಿ ಸಡೆಸುವುದು, ಮೀನುಗಾರಿಕೆ, ಜಾಲಗಾರ ವೃತ್ತಿ, ಸುಣಗಾರ ವೃತ್ತಿ ಮುಂತಾದವುಗಳ ಮೂಲಕ ಬಂದ ಅಂಬಿಗರ ಸಮುದಾಯವು ಗಂಗೆಯನ್ನು ಆರಾಧ್ಯದೇವತೆಯನ್ನಾಗಿ ಆರಾಧಿಸುತ್ತಾರೆ.

ಗಂಗಾ ಮತಸ್ಥ ಸಮಾಜವೆಂದು ಗುರುತಿಸಿಕೊಂಡಿರುವ ಅಂಬಿಗರ ಸಮುದಾಯವು ಒಟ್ಟು 39 ವಿವಿಧ ಜಾತಿಯಿಂದ ಕರೆಯುವುದುಂಟು. ಕಬ್ಬಲಿಗ, ಓಲೆಕಾರ, ಕೋಲಕಾರ, ಅಂಬಿಗ, ಗಂಗಾಮತ, ಬೆಸ್ತ, ಮೋಲಿ, ಪರಿವಾರ, ತಳವಾರ, ಟೋಕರೆ ಕೋಳಿ, ಕೋಲಿಡೋರ, ಸುಣಗಾರ ಮುಂತಾದ ಪರ್ಯಾಯ ಪದಗಳಿಂದ ಗುರುತಿಸಲ್ಪಟ್ಟಿವೆ. ಸಂವಿಧಾನದ ಕಾಲಂ 342ರ ಕ್ರಮಸಂಖ್ಯೆ 22ರಲ್ಲಿ ಸ್ಥಾನ ಪಡೆದಿವೆ. ಕರ್ನಾಟಕ ಸರ್ಕಾರ ಕೇಂದ್ರದ 1950ರ ಆದೇಶದ ಪ್ರಕಾರ ಕೆಲ ಗುಂಪುಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿವೆ.

ಅಂಬಿಗರ ಸಮುದಾಯ ಕುರಿತು ಹಂಪಿ ವಿಶ್ವವಿದ್ಯಾಲಯ ಅಧ್ಯಯನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿವೆ. ಆ ವರದಿಯನ್ನು ಯಥಾವತ್ತಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು, ಅದರಂತೆ ಎಲ್ಲಾ ಪರ್ಯಾಯ ಪದಗಳ ಅಂಬಿಗರ ಸಮುದಾಯವನ್ನು ಪರಿಶಿಷ್ಟ ಪಂಗಡವಾಗಿ ಗುರುತಿಸಿಬೇಕಾಗಿದೆ.

ಈ ಕುರಿತು ರಾಜ್ಯ ಹಾಗೂ ಕೇಂದ್ರ ಸರಕಾರಗಳು ಜಾರಿ ಮಾಡಬೇಕಾಗಿದೆ.

ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಅಂಬಿಗರ ಚೌಡಯ್ಯನ ಜಯಂತಿಯ ಆಚರಿಸುತ್ತಿರುವ ಈ ಸಂದರ್ಭದಲ್ಲಿ ಅತ್ಯಂತ ಹಿಂದುಳಿದ ಅಂಬಿಗರ ಸಮಾಜವನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಮಾಜಿಕವಾಗಿ, ರಾಜಕೀಯವಾಗಿ ಮುಖ್ಯ ವಾಹಿನಿಗೆ ತರಲು ಹತ್ತು-ಹಲವು ಯೋಜನೆಗಳನ್ನು ರೂಪಿಸಿ ಜಾರಿಗೆ ತರಬೇಕಾಗಿದೆ.

***

**- ಡಾ. ಗಣೇಶ. ಕೃಷ್ಣ. ಸುಲ್ತಾನಪುರ**
**ಜಿಲ್ಲಾ ಅಧ್ಯಕ್ಷರು,**
**ಅಖಿಲ ಭಾರತೀಯ ಕೋಲಿ ಸಮಾಜ,**
**ಗದಗ**
**ಮೊ : 9902066252**

# ಅವಕಾಶ ಸಿಕ್ಕಾಗ ನಮ್ಮ ಕಲೆ ಪರಿಚಯಿಸಲು ಮುಂದಾಗಬೇಕು: ಸುಮೇಧಾ ಮಿರಜ



**ಅಥಣಿ :** ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಬ್ರಾಹ್ಮಣ ಸಮ್ಮೇಳನದಲ್ಲಿ ಅಥಣಿ ಪಟ್ಟಣದ ಹವ್ಯಾಸಿ ಸಂಗೀತ ಕಲಾವಿದೆ ಶ್ರೀಮತಿ ಸುಮೇಧಾ ಪ್ರಮೋದ ಮಿರಜ ಭಕ್ತಿ, ಭಾವ ಹಾಗೂ ಮರಾಠಿ ಅಭಂಗ ಹಾಡಿ ಪ್ರೇಕ್ಷಕರನ್ನು ರಂಜಿಸಿ ಮೆಚ್ಚುಗೆ ಪಡೆದುಕೊಂಡರು.

ಇದೇ ಮೊದಲ ಬಾರಿಗೆ ಗಡಿಭಾಗದ ಅಥಣಿಯ ಕಲಾವಿದರೊಬ್ಬರು ರಾಜ್ಯ ಮಟ್ಟದ ಬ್ರಾಹ್ಮಣ ಸಮಾವೇಶದಲ್ಲಿ ಸಂಗೀತ ಕಾರ್ಯಕ್ರಮ ನೀಡಿರುವುದು ನಮಗೆಲ್ಲ ಹೆಮ್ಮೆಯ ಸಂಗತಿಯಾಗಿದೆ.

ಗಡಿ ಭಾಗದ ಅಥಣಿಯವಳಾದ ನನ್ನ ಕಲೆ ಮೆಚ್ಚಿ ನನಗೆ ರಾಜ್ಯಮಟ್ಟದ ಸಮ್ಮೇಳನದಲ್ಲಿ ಹಾಡಲು ಅವಕಾಶ ಮಾಡಿಕೊಟ್ಟ ಮಹಾಸಭಾದ ರಾಜ್ಯ ಅಧ್ಯಕ್ಷ ಅಶೋಕ ಹಾರ್ನಳ್ಳಿಯವರಿಗೆ ಕೃತಜ್ಞತೆ ಸಲ್ಲಿಸಿದ ಸುಮೇಧಾ ಮೀರಜ, ಅವಕಾಶ ಬಂದಾಗ ನಮ್ಮ ಕಲೆಯನ್ನು ಪರಿಚಯಿಸುವ ಕಾರ್ಯಕ್ಕೆ ನಾವೆಲ್ಲ ಮುಂದಾಗಬೇಕಿದೆ ಎಂದು ಸ್ಥಳೀಯ ಕಲಾವಿದರನ್ನು ಪ್ರೋತ್ಸಾಹಿಸಿದರು.

ಸಮ್ಮೇಳನದಲ್ಲಿ ಭಾಗವಹಿಸಿದ್ದ ಬ್ರಾಹ್ಮಣ ಮಹಾಸಭಾದ ಅಥಣಿ ತಾಲೂಕಾ ಕಾರ್ಯಾಧ್ಯಕ್ಷ ಡಾ.ವಿಜಯಕುಮಾರ ಚೈನಿ ಮಾತನಾಡಿ, ಅಥಣಿಯ ಕಲಾವಿದರೊಬ್ಬರಿಗೆ ಇಂತಹ ರಾಜ್ಯಮಟ್ಟದ ವೇದಿಕೆಯಲ್ಲಿ ಅವಕಾಶ ದೊರಕಿರುವುದು ನಮಗೆಲ್ಲ ಅಭಿಮಾನದ ಸಂಗತಿ ಎಂದರು.

ಕಾರ್ಯಕ್ರಮದಲ್ಲಿ ಸ್ಥಳೀಯ ನ್ಯಾಯವಾದಿ ಎನ್.ಕೆ.ಪಾಟೀಲ, ಪುರಸಭಾ ಸದಸ್ಯೆ ಮೃಣಾಲಿನಿ ದೇಶಪಾಂಡೆ, ಡಾ.ಪಿ.ಪಿ. ಮೀರಜ, ಡಾ. ವಾಣಿ ಚೈನಿ, ಸುನೀಲ ಕುಲಕರ್ಣಿ, ಸತೀಶ ಕುಲಕರ್ಣಿ ಸೇರಿದಂತೆ ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದರು.

## ನಾಗರಿಕ ಸಮಾಜ ತಲೆ ತಗ್ಗಿಸುವಂತಾಗಿದೆ: ಕೂಚಬಾಳ

**ತಾಳಿಕೋಟೆ :** ವಿಜಯಪುರ ನಗರದ ಹೊರ ವಲಯದಲ್ಲಿ ಇಟ್ಟಿಗೆ ಬಟ್ಟಿಯ ಕಾರ್ಮಿಕರನ್ನು ಕಟ್ಟಿಹಾಕಿ ಥಳಿಸಿರುವದು ಇಡೀ ರಾಜ್ಯವೇ ತಲೆ ತಗ್ಗಿಸುವಂತಹ ಘಟನೆ ಇದಾಗಿದೆ ಕೂಡಲೇ ಆರೋಪಿತರಿಗೆ ಕಠಿಣ ಶಿಕ್ಷೆಗೆ ಗುರಿ ಪಡಿಸಬೇಕೆಂದು ಭಾರತೀಯ ಜನತಾ ಪಕ್ಷದ ಜಿಲ್ಲಾ ಅಧ್ಯಕ್ಷ ಆರ್.ಎಸ್.ಪಾಟೀಲ(ಕೂಚಬಾಳ) ಅವರು ಒತ್ತಾಯಿಸಿದರು.

ಸೋಮವಾರರಂದು ಪಟ್ಟಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು ದುಡಿಯಲು ಕಾರ್ಮಿಕರಿದ್ದರೆ ಮಾಲಿಕನಾಗಲು ಸಾದ್ಯ ಆದರೆ ಮಾಲಿಕನೇ ಕಾರ್ಮಿಕರನ್ನು ತನ್ನ ಇಟ್ಟಿಗೆ ಬಟ್ಟಿಗೆ ಕರೆಯಿಸಿಕೊಂಡು ಮನಬಂದಂತೆ ಪೈಪಿನಿಂದ ಇನ್ನಿತರ ಸಲಕರಣೆಗಳಿಗೆ 3-4 ದಿನಗಳ ಕಾಲ ಕೂಡಿ ಹಾಕಿ ಥಳಿಸಿರುವದು ಹೇಯ ಕೃತ್ಯವಾಗಿದೆ ಅಲ್ಲದೇ ಇಡೀ ನಾಗರಿಕ ಸಮಾಜವೇ ತಲೆ ತಗ್ಗಿಸುವಂತಾಗಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟು ಹೋಗಿದೆ ಎಂಬುದನ್ನು ಇಂತಹ ಘಟನೆಗಳ ನಿರ್ದೇಶನಗಳ ಸಾಕಷ್ಟು ಇವೆ ಆದರೆ ಪೊಲೀಸ್ ಇಲಾಖೆ ನಿರ್ವಹಣೆ ಮಾಡುತ್ತಿರುವ ರಾಜ್ಯದ ಗ್ರಹ ಸಚೀವರು ಮೌನಕ್ಕೆ ಶರಣಾಗುವದರ ಜೊತೆಗೆ ಇಂತಹ ಹೇಯ ಕೃತ್ಯ ವೆಸಗುವವರ ಬೆನ್ನಿಗೆ ನಿಂತಿರುವದು ಅವರ ಆಡಳಿತ ವೈಫಲ್ಯ ಎತ್ತಿ ತೋರಿಸುತ್ತಿದೆ ಎಂದರು.

# ಮೆಡಿಕಲ್ ಕಾಲೇಜಿನಲ್ಲಿ ಮೃತ ಶರೀರ ಆಧಾರಿತ ಶಸ್ತ್ರಚಿಕಿತ್ಸಾ ಕೌಶಲ್ಯ ಪ್ರಯೋಗಾಲಯ ಉದ್ಘಾಟನೆ

# ಮೃತ ಶರೀರ ಶಸ್ತ್ರಚಿಕಿತ್ಸೆ ವೈದ್ಯ ವಿಜ್ಞಾನದ ನೂತನ ಅವಿಷ್ಕಾರ: ಡಾ. ವೀರಣ್ಣ ಚರಂತಿಮಠ

**ಬಾಗಲಕೋಟೆ :** ವೈದ್ಯಕೀಯ ಕ್ಷೇತ್ರದಲ್ಲಿ ಪರಿಣಿತ ವೈದ್ಯನಾಗಲು ವಿದ್ಯಾರ್ಥಿಗಳಿಗೆ ಶರೀರ ರಚನೆಯ ಜ್ಞಾನ ಅವಶ್ಯಕವಾಗಿದೆ. ಈ ಕಾರಣದಿಂದ ಮೃತಶರೀರವನ್ನು ಅಧ್ಯಯನಕ್ಕೆ ಬಳಸಿಕೊಂಡು, ಮೃತಶರೀರದ ಮೂಲಕ ಶಸ್ತ್ರಚಿಕಿತ್ಸೆಯ ತರಬೇತಿಯನ್ನು ಕೂಡ ನೀಡಲಾಗುತ್ತಿದೆ.

ಮೃತಶರೀರ ಶಸ್ತ್ರಚಿಕಿತ್ಸೆ ವೈದ್ಯವಿಜ್ಞಾನದ ನೂತನ ಅವಿಷ್ಕಾರವಾಗಿದೆ ಎಂದು ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಸಿ.ಚರಂತಿಮಠ ಹೇಳಿದರು.

ನಗರದ ಬಿ.ವಿ.ವಿ ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ ಅನಾಟಮಿ ವಿಭಾಗದಲ್ಲಿ 25 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಸ್ಥಾಪಿಸಲಾದ ಮೃತಶರೀರ ಆಧಾರಿತ ಶಸ್ತ್ರಚಿಕಿತ್ಸಾ ಕೌಶಲ್ಯ ಪ್ರಯೋಗಾಲಯವನ್ನು ಉದ್ಘಾಟಿಸಿ ಮಾತನಾಡಿದ ಅವರು 'ಅತ್ಯಂತ ಸುಸಜ್ಜಿತ ಪ್ರಯೋಗಾಲಯ ಇದಾಗಿದೆ. ವಿವಿಧ ಪ್ರಕಾರದ ಶಸ್ತ್ರಚಿಕಿತ್ಸೆ ತರಬೇತಿಯನ್ನು




ನೀಡಲು ಅಗತ್ಯವಾದ ಎಲ್ಲ ಪ್ರಕಾರದ ಸೌಲಭ್ಯಗಳನ್ನು ಒಳಗೊಂಡಿದೆ.

ಕರ್ನಾಟಕ ಮಾತ್ರವಲ್ಲದೆ ಬೇರೆ ರಾಜ್ಯಗಳ ವೈದ್ಯಕೀಯ ವಿದ್ಯಾರ್ಥಿಗಳಿಗೆ ಮತ್ತು ವೈದ್ಯರಿಗೆ ಪ್ರಯೋಜನವಾಗಲಿದೆ' ಎಂದರು.


ಅನಾಟಮಿ ವಿಭಾಗದ ಮುಖ್ಯಸ್ಥ ಡಾ.ಸಂಜೀವ ಕೊಳಗಿ ಮತ್ತು ಇ.ಎನ್.ಟಿ ವಿಭಾಗದ ಮುಖ್ಯಸ್ಥ ಡಾ.ಸಿ.ಎಸ್.ಹಿರೇಮಠ ಪ್ರಯೋಗಾಲಯದ ವೈಶಿಷ್ಟ್ಯಗಳ ಬಗ್ಗೆ ತಿಳಿಸುತ್ತಾ, ಶಸ್ತ್ರಚಿಕಿತ್ಸೆಯಲ್ಲಿ ಪರಿಣಿತಿಯನ್ನು ಹೊಂದಲು ವೈದ್ಯಕೀಯ ಕೋರ್ಸಿನ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮೃತದೇಹಗಳ ಮೇಲೆ ಶಸ್ತ್ರಚಿಕಿತ್ಸಾ ತರಬೇತಿಯನ್ನು ನೀಡಲು ವೈದ್ಯಕೀಯ ಕಾಲೇಜುಗಳಲ್ಲಿ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುತ್ತಿದೆ. ಭಾರತದ ಕೆಲವೇ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಈ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ. ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಸ್ಥಾಪನೆಯಾದ ಮೃತಶರೀರ ಆಧಾರಿತ ಶಸ್ತ್ರಚಿಕಿತ್ಸಾ ಕೌಶಲ್ಯ ಪ್ರಯೋಗಾಲಯ ಉತ್ತರ ಕರ್ನಾಟಕದಲ್ಲಿ ಮೊದಲನೆಯದ್ದು ಎನ್ನುವುದು ಹೆಮ್ಮೆಯ ಸಂಗತಿ, ಹಾಗೂ ನರಶಸ್ತ್ರಚಿಕಿತ್ಸೆ, ಆರ್ಥ್ರೋಸ್ಕೊಪಿ, ಲ್ಯಾಪ್ರೋಸ್ಕೊಪಿ, ಎಂಡೋಸ್ಕೊಪಿಯಂತಹ ಕ್ಲಿಷ್ಟಕರವಾದ ಶಸ್ತ್ರಚಿಕಿತ್ಸೆಯಲ್ಲಿ ಪರಿಣಿತಿ ಹೊಂದಲು ಈ ಪ್ರಯೋಗಾಲಯದಲ್ಲಿ ತರಬೇತಿ ನೀಡಲಾಗುವುದು. ವೈದ್ಯಕೀಯ ವಿಜ್ಞಾನದ ಸ್ನಾತಕೋತ್ತರ ವಿದ್ಯಾರ್ಥಿಗಳು ಮಾತ್ರವಲ್ಲದೆ ವಿವಿಧ ವಿಷಯಗಳ ಶಸ್ತ್ರಚಿಕಿತ್ಸಾ ತಜ್ಞರು ಕೂಡ ಈ ರೀತಿಯ ತರಬೇತಿಯನ್ನು ಪಡೆಯುತ್ತಿರುವುದು ವಿಶೇಷವಾಗಿದೆ. ಈಗಾಗಲೇ ಮೃತಶರೀರ ಶಸ್ತ್ರಚಿಕಿತ್ಸೆ ಸಂಬಂಧಿತ ಹಲವು ಕಾರ್ಯಾಗಾರಗಳನ್ನು ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಆಯೋಜಿಸಿ ವಿದ್ಯಾರ್ಥಿಗಳಿಗೆ ಮತ್ತು ವೈದ್ಯರಿಗೆ ತರಬೇತಿಯನ್ನು ನೀಡಲಾಗಿದೆ. ಮಹಾವಿದ್ಯಾಲಯದ ಶರೀರ ರಚನಾಶಾಸ್ತ್ರ ವಿಭಾಗದ ವೈದ್ಯರು ಆವಿಷ್ಕರಿಸಿರುವ ವಿಶೇಷ ದ್ರಾವಣದಿಂದ ಮೃತ ದೇಹಗಳನ್ನು ಮತ್ತು ಅವುಗಳ ಅಂಗಾಂಗಗಳನ್ನು ಜೀವಂತ ವ್ಯಕ್ತಿಯಲ್ಲಿರುವಂತೆಯೇ ಸಂರಕ್ಷಿಸಿಡುವ ವಿಶೇಷ ವ್ಯವಸ್ಥೆ ಇದೆ. ಜೊತೆಗೆ ಮೃತ ದೇಹದ ಮೆದುಳಿನಲ್ಲಿ ಕೃತಕ ದ್ರವವನ್ನು (ಸಿ.ಎಸ್.ಎಫ್) ಸಂಚರಿಸುವಂತೆ ಮಾಡಿ ಮೃತದೇಹದ ಮೆದುಳನ್ನು ಸಂರಕ್ಷಿಸಿಡಲಾಗುತ್ತಿದೆ. ಮೃತದೇಹದ ಮೆದುಳಿನಲ್ಲಿ ಕೃತಕ ದ್ರವ ಸಂಚಾರ ಮಾಡುವ ಈ ಪ್ರಕಾರದ ಸಂಶೋಧನೆಯು ಭಾರತದಲ್ಲೇ ಪ್ರಥಮ ಹಾಗೂ ಜಗತ್ತಿನಲ್ಲಿ ಎರಡನೆಯದಾಗಿದೆ.

ಮೃತಶರೀರ ಶಸ್ತ್ರಚಿಕಿತ್ಸಾ ಪ್ರಯೋಗಾಲಯದಲ್ಲಿ ಕಿವಿ, ಮೂಗು, ಗಂಟಲು, ಎಲುಬು ಮತ್ತು ಕೀಲು, ನೇತ್ರ, ನರ, ಮೆದುಳು, ಸ್ತ್ರೀರೋಗ ಸಂಬಂಧಿತ ಶಸ್ತ್ರಚಿಕಿತ್ಸೆ ಇತ್ಯಾದಿ ಶಸ್ತ್ರಚಿಕಿತ್ಸೆಗಳಲ್ಲಿ ತರಬೇತಿಯನ್ನು ನೀಡಲಾಗುತ್ತದೆ ಎಂದರು.

ಉದ್ಘಾಟನಾ ಸಮಾರಂಭದಲ್ಲಿ ಬಿ.ವಿ.ವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಎನ್.ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್.ಸಜ್ಜನ (ಬೇವೂರ), ಬಿ.ವಿ.ವಿ ಸಂಘದ ಗೌರವಾನ್ವಿತ ಸದಸ್ಯರು, ಮೆಡಿಕಲ್ ಕಾಲೇಜಿನ ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ, ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ, ಅನಾಟಮಿ, ಇ.ಎನ್.ಟಿ ಮತ್ತು ವಿವಿಧ ವಿಭಾಗಗಳ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ನಿಧನ ವಾರ್ತೆಗಳು

### ವಸಂತ ಪತ್ತಾರ



**ಬನಹಟ್ಟಿ :** ಇಲ್ಲಿಯ ಮಂಗಳವಾರ ಪೇಟೆಯ ಹನುಮಾನ ದೇವಸ್ಥಾನ ಹತ್ತಿರದ ನಿವಾಸಿ ವಸಂತ ಪತ್ತಾರ ತಮ್ಮ 90 ನೆಯ ವಯಸ್ಸಿನಲ್ಲಿ ನಿಧನರಾದರು. ಮೃತರು ತಮ್ಮ ಹಿಂದೆ ಇಬ್ಬರು ಪುತ್ರರು ಹಾಗು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

### ದಾನಪ್ಪ ಹೊರಟ್ಟಿ



**ಬನಹಟ್ಟಿ :** ಇಲ್ಲಿಯ ಸೋಮವಾರ ಪೇಟೆಯ ದೇವರದಾಸಿಮಯ್ಯ ಕಾಲನಿಯ ನಿವಾಸಿ ದಾನಪ್ಪ ಹೊರಟ್ಟಿ ತಮ್ಮ 76 ನೆಯ ವಯಸ್ಸಿನಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗು ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

### ಸುನೀಲ ದೇ. ಹಲ್ಯಾಳ



**ಬನಹಟ್ಟಿ :** ಇಲ್ಲಿಯ ತಟಗಾರ ಗಲ್ಲಿಯ ನಿವಾಸಿ ಸುನೀಲ ದೇವೇಂದ್ರಪ್ಪ ಹಳ್ಯಾಳ (ಮದಭಾಂವಿ) ತಮ್ಮ 43 ನೆಯ ವಯಸ್ಸಿನಲ್ಲಿ ಜನೇವರಿ 21 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

### ವಸಂತರಾವ ಗುಡಿ



**ಬಾಗಲಕೋಟೆ :** ನಗರದ ಹಿರಿಯ ನ್ಯಾಯವಾದಿ, ಸಪ್ತಗಿರಿ ಬಡಾವಣೆ ನಿವಾಸಿ ವಸಂತರಾವ ಎಸ್.ಗುಡಿ (68) ಅನಾರೋಗ್ಯದಿಂದ ಮಂಗಳವಾರ ನಿಧನರಾದರು. ಅವರಿಗೆ ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯಂದಿರು ಇದ್ದಾರೆ.

## ತೂಗು ಲೈಬ್ರರಿ ಉದ್ಘಾಟನೆ ಹಾಗೂ ಕೌಶಲ್ಯ ತರಬೇತಿ ಪ್ರಮಾಣ ಪತ್ರ ವಿತರಣೆ

**ಬಾಗಲಕೋಟೆ :** ಮಕ್ಕಳಲ್ಲಿ ಕತೆಗಳ ಮೂಲಕ ಓದಿನಲ್ಲಿ ಆಸಕ್ತಿ ಮತ್ತು ಆತ್ಮಸ್ಥೈರ್ಯ ಮೂಡಿಸುವ ಉದ್ದೇಶದಿಂದ ತೂಗು ಲೈಬ್ರರಿ ತೆರೆಯಲಾಗಿದೆ ಎಂದು ಮಾಜಿ ಶಾಸಕರು ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಹೇಳಿದರು.

ಬಿ.ವಿ.ವಿ.ಸಂಘದ ಬಸವೇಶ್ವರ ಅಂತರಾಷ್ಟ್ರೀಯ ಪಬ್ಲೀಕ್ ಶಾಲೆ ಹಾಗೂ ಮಚಾನಿ ಗ್ರೂಪ್ನ ಇಂಡಿ ವಿಲ್ಲೇಜ ಫೌಂಡೇಶನ್ ವತಿಯಿಂದ ಬಿ.ವಿ.ವಿ ಸಂಘದ 15 ಶಾಲೆಗಳಿಗೆ ತೂಗು ಲೈಬ್ರರಿ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ

ಮಾತನಾಡಿದ ಅವರು ಈ ತೂಗು ಲೈಬ್ರರಿಯಲ್ಲಿ ವಿವಿಧ ರೀತಿಯ 2000 ಕಥೆ ಪುಸ್ತಕಗಳನ್ನು ಇಂಡಿ ವಿಲ್ಲೇಜ ಫೌಂಡೇಶನ್ ನಿಂದ ನೀಡಲಾಗಿದೆ. ಮಕ್ಕಳಲ್ಲಿ ಆಧುನಿಕತೆಗೆ ತಕ್ಕಂತೆ ಅವರ ಸರ್ವಾಂಗಿಣ ಜ್ಞಾನ ಅಭಿವೃದ್ಧಿಗೆ ಇವುಗಳು ಸಹಕಾ-



ರಿಯಾಗಲಿವೆ, ಬಿ.ವಿ.ವಿ.ಸಂಘ ಸುಮಾರು 15 ಶಾಲೆಗಳಲ್ಲಿ ಈ ತೂಗು ಲೈಬ್ರರಿಗಳನ್ನು ಪ್ರಾರಂಭಿಸುತ್ತಿದ್ದು ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು, ಇಂಡಿ ವಿಲ್ಲೇಜ ಫೌಂಡೇಶನ ಹಾಗೂ ಬಿ.ವಿ.ವಿ.ಸಂಘದ ಯೋಜನೆಗಳಿಂದ ಸಾಕಷ್ಟು ಜನ ವಿದ್ಯಾರ್ಥಿಗಳು ಇಲ್ಲಿ ತರಬೇತಿ ಪಡೆದು ಉದ್ಯೋಗಿಗಳಾಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಶಾಲೆಯ ಮತ್ತು ಕಾಲೇಜು ವಿಧ್ಯಾರ್ಥಿಗಳು ಈ ಯೋಜನೆಗಳ ಸದುಪಯೋಗ ಪಡೆಯಬೇಕು ಎಂದರು.

ಇದೇ ಸಂದರ್ಭದಲ್ಲಿ ಇಂಡಿ ವಿಲ್ಲೇಜ ಫೌಂಡೇಶನನ ಕೌಶಲ್ಯ ತರಬೇತಿ ಪೂರ್ಣಗೊಳಿಸಿದ ಬಿ.ವಿ.ವಿ.ಸಂಘದ ಅಕ್ಕ ಮಹಾದೇವಿ ಮಹಿಳಾ ಕಾಲೇಜಿನ 15 ವಿದ್ಯಾರ್ಥಿನಿಯರಿಗೆ ಪ್ರಮಾಣ ಪತ್ರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಶಾಲಾ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಹಾಂತೇಶ ಶೆಟ್ಟರ, ಪ್ರಾಚಾರ್ಯ ಸುರೇಶ ಹೆಗಡೆ, ಬಿ.ಎಸ್. ಅಂಗಡಿ. ಇಂಡಿವಿಲ್ಲೇಜನ ವ್ಯವಸ್ಥಾಪಕರಾದ ಕೃಷ್ಣ, ತೂಬ, ದೀಪಾ, ರಾಘವೇಂದ್ರ, ರೋಹನ್ ಮತ್ತು ತಮ್ಮನಗೌಡ ಸೆರಿದಂತೆ ಅನೇಕರು ಇದ್ದರು.




## ರೈತನ ರಾಷ್ಟ್ರ ಪ್ರೇಮ

**ಕಂದಗಲ್ಲ :** ಇಲ್ಲಿಯ ರೈತ ಮಹಾಂತೇಶ ಸಿದ್ದಬಸಯ್ಯ ಮಠ 76ನೇ ಗಣರಾಜ್ಯೋತ್ಸವದ ದಿವಸ ಬೆಳಿಗ್ಗೆ ತನ್ನ ಟ್ರ್ಯಾಕ್ಟರ್ ಗೆ ರಾಷ್ಟ್ರ ಧ್ವಜ ಏರಿಸಿ ರಾಷ್ಟ್ರ ಧ್ವಜಕ್ಕೆ ಗೌರವ ಸಲ್ಲಿಸಿ ರಾಷ್ಟ್ರ ಪ್ರೇಮ ಮೆರದಿದ್ದಾನೆ. ನಂತರ ಹೊಲದಲ್ಲಿ ತಮ್ಮ ಕೆಲಸ ಪ್ರಾರಂಭಿಸಿ ದೇಶದ ಬೆನ್ನೆಲಬು ರೈತ ಎಂಬುದಕ್ಕೆ ಸಾಕ್ಷಿಯಾಗಿದ್ದಾನೆ. ಈತನ ರಾಷ್ಟ್ರ ಪ್ರೇಮ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

## ಸಾಮಾಜಿಕ ಚಿಂತನೆಗಳ ಶರಣ ಅಂಬಿಗರ ಚೌಡಯ್ಯ



**ರಬಕವಿ-ಬನಹಟ್ಟಿ :** ಹನ್ನೆರಡನೆಯ ಶತಮಾನದಲ್ಲಿ ಶರಣರಲ್ಲಿ ಪ್ರಮುಖರಾದ ನಿಜ ಶರಣ ಅಂಬಿಗರ ಚೌಡಯ್ಯನವರ ವಚನಗಳಲ್ಲಿ ನೈತಿಕ ಮತ್ತು ಸಾಮಾಜಿಕ ಚಿಂತನೆಗಳನ್ನು ಹೆಚ್ಚಾಗಿ ಕಾಣುತ್ತೇವೆ. ಚೌಡಯ್ಯನವರು ನಿರ್ಭೀತ, ನಿಷ್ಠುರ ವ್ಯಕ್ತಿಗಳಾಗಿದ್ದರು. ಅವರೊಬ್ಬ ಶ್ರೇಷ್ಠ ಅನುಭಾವಿಯಾಗಿದ್ದರು ಎಂದು ರಬಕವಿ ಬನಹಟ್ಟಿ ತಹಶೀಲ್ದಾರ್ ಕಾರ್ಯಾಲಯದ ಶಿರಸ್ತೆದಾರ ಆರ್. ಎಸ್. ಸಾತಿಹಾಳ ತಿಳಿಸಿದರು.

ಅವರು ಮಂಗಳವಾರ ಇಲ್ಲಿನ ತಹಶೀಲ್ದಾರ್ ಕಾರ್ಯಾಲಯದಲ್ಲಿ ನಡೆದ ಅಂಬಿಗರ ಚೌಡಯ್ಯನವರ ಜಯಂತ್ಯೋತ್ಸವದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅನ್ಯಾಯ, ಜಾತೀಯತೆ, ಮೌಢ್ಯ ಆಚರಣೆಗಳನ್ನು ಕಟುವಾಗಿ ಟೀಕಿಸುತ್ತಿದ್ದ ಚೌಡಯ್ಯನವರ ವಚನಗಳು ಇಂದಿಗೂ ಪ್ರಸ್ತುತವಾಗಿದ್ದು, ಸಮಾಜ ಬಾಂಧವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು ಮತ್ತು ಶರಣರ ವಚನಗಳನ್ನು ಓದಿ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಾತಿಹಾಳ ತಿಳಿಸಿದರು.

ಶಿರಸ್ತೆದಾರ ಎಸ್. ಎಂ. ಕೂಗಾಟೆ, ಕಂದಾಯ ನಿರೀಕ್ಷಕ ಪ್ರಕಾಶ ಮಠಪತಿ, ಗ್ರಾಮ ಲೆಕ್ಕಾಧಿಕಾರಿ ಸದಾಶಿವ ಕುಂಬಾರ, ರವಿ ಹುಲ್ಲನ್ನವರ, ರವಿ ಈಟಿ, ಸಮಾಜ ಬಾಂಧವರಾದ ಕಾಡಪ್ಪ ಹುಲಗಬಾಳಿ, ದುಂಡಪ್ಪ ಗಣಿ, ಮಲ್ಲು ಗಸ್ತಿ, ರಾಜು ಮೋಪಗಾರ, ಶ್ರೀಮಂತ ಮೋಪಗಾರ, ಈರಪ್ಪ ತಮದಡ್ಡಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಬ್ಯಾಂಕರ್ಸ್‌ಗಳಿಗೆ ಜಿಲ್ಲಾ ಮಟ್ಟದ ಕಾರ್ಯಾಗಾರ



**ಬಾಗಲಕೋಟೆ :** ಜಿಲ್ಲೆಯ ಬದಾಮಿ, ಬಾಗಲಕೋಟೆ, ಬೀಳಗಿ, ಗುಳೇದಗುಡ್ಡ, ಹುನಗುಂದ, ಇಳಕಲ್ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಬ್ಯಾಂಕ್ ವ್ಯವಸ್ಥಾಪಕರುಗಳಿಗೆ ಎನ್.ಆರ್.ಎಲ್.ಎಂ ಯೋಜನೆಯ ಸ್ವ-ಸಹಾಯ ಸಂಘಗಳ ಬ್ಯಾಂಕ್ ಲಿಂಕೇಜ್ ಹಾಗೂ ಎಂಟರ್ಪ್ರೈಸ್ ಫೈನಾನ್ಸಿಂಗ್, ಸರ್ಕಾರದ ಯೋಜನೆಗಳ ಕುರಿತು ಹಮ್ಮಿಕೊಂಡ ಒಂದು ದಿನದ ಜಿಲ್ಲಾ ಮಟ್ಟದ ಕಾರ್ಯಾಗಾರವನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ್ ಕುರೇರ ಉದ್ಘಾಟಿಸಿದರು.

ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಬೆಂಗಳೂರಿನ ಸಂಜೀವಿನಿ ಕೆ.ಎಸ್.ಆರ್.ಎಲ್.ಪಿ. ಎನ್ ಜಿಲ್ಲಾ ಪಂಚಾಯತ ಹಾಗೂ ಜಿಲ್ಲಾ ಅಭಿಯಾನ ನಿರ್ವಹಣಾ ಘಟಕದ ಸಹಯೋಗದಲ್ಲಿ ಹಮ್ಮಿಕೊಂಡ ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡಿದ ಅವರು ಬ್ಯಾಂಕ್ ಸಾಲಕ್ಕಾಗಿ ಅರ್ಜಿ ಸಲ್ಲಿಸುವ ಸಂಘಗಳಿಗೆ ವಿಳಂಬ ಮಾಡದೇ ಸಾಲ ಮಂಜೂರು ಮಾಡಲು ಕರೆ ನೀಡಿದರು.

ಇದರಿಂದ ಮಹಿಳೆಯರು ಜೀವನೋಪಾಯ ಚಟುವಟಿಕೆ ಆರಂಭಿಸಲು, ಚಟುವಟಿಕೆ ಅಭಿವೃದ್ಧಿ ಪಡಿಸಲು ಅನುಕೂಲವಾಗಿ ಮಹಿಳೆಯರು ಆರ್ಥಿಕ ಅಭಿವೃದ್ಧಿ ಹೊಂದಲು ಸಹಾಯವಾಗುತ್ತದೆ. ಪ್ರತಿ ಗ್ರಾಮಪಂಚಾಯತನಲ್ಲಿ ಸಂಜೀವಿನಿ ಯೋಜನೆಯಡಿ ರಚಿಸಲಾದ ಒಕ್ಕೂಟಗಳಿವೆ ಬ್ಯಾಂಕ್ & ಒಕ್ಕೂಟಗಳು ಸಹಯೋಗದೊಂದಿಗೆ ಗ್ರಾಮೀಣ ಭಾಗದ ಜನರ ಪಿಎಂಎಸ್‌ಬಿವಾಯ್ ಮತ್ತು ಪಿಎಂಜೆಜೆಬಿವಾಯ್ ವಿಮೆ ಮಾಡಿಸಲು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕ ಡಾ.ಪುನೀತ್ ಬಿ. ಆರ್, ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ, ಜಿಲ್ಲಾ ಅಗ್ರಣಿ ಬ್ಯಾಂಕ್ ವ್ಯವಸ್ಥಾಪಕ ರಾಜಕುಮಾರ ಹೂಗಾರ, ರಾಜ್ಯ ಸಂಪನ್ಮೂಲ ವ್ಯಕ್ತಿಗಳಾದ ಸುಂದರೇಶ ಆರ್ ಹಾಗೂ ಎನ್.ಆರ್.ಎಲ್.ಎಮ್ ಜಿಲ್ಲಾ & ತಾಲೂಕು ಘಟಕದ ಸಿಬ್ಬಂದಿಗಳು ಹಾಜರಿದ್ದರು.

## ಕಾಯಕದಲ್ಲಿ ನೀತಿ ಮತ್ತು ದಾಸೋಹದಲ್ಲಿ ಪ್ರೀತಿ ಬಹು ಮುಖ್ಯ

**ಬನಹಟ್ಟಿ :** ಕಾಯಕದಲ್ಲಿ ನೀತಿ ಮತ್ತು ದಾಸೋಹದಲ್ಲಿ ಪ್ರೀತಿ ಬಹು ಮುಖ್ಯವಾಗಿದೆ. ಇದನ್ನು ಅನುಸರಿಸಿಕೊಂಡು ಬಂದವರು ಶರಣರು. ನಮ್ಮ ಅಂತರಂಗವನ್ನು ಶುದ್ಧ ಮಾಡಿಕೊಳ್ಳಲು ಧ್ಯಾನ ಧಾರಣ ಮತ್ತು ಸಮಾಧಿ ಸ್ಥಿತಿಗಳು ಅತ್ಯವಶ್ಯವಾಗಿವೆ. ಶರಣರು ಶಿವಯೋಗವನ್ನು ಸಾಧಿಸಿದರೆ, ಜೀವನದಲ್ಲಿ ಶ್ರದ್ದೆಯಿದ್ದರೆ ಮಾತ್ರ ನಿಷ್ಠೆ ಬರುತ್ತದೆ ಎಂದು ಹಾರೂಗೇರಿಯ ಶರಣ ವಿಚಾರ ವಾಹಿನಿಯ ಐ. ಆರ್. ಮಠಪತಿ ತಿಳಿಸಿದರು.

ಅವರು ಭಾನುವಾರ ಇಲ್ಲಿನ ರವೀಂದ್ರ ಪತ್ತಾರ ಅವರ ಮನೆಯ ಆವರಣದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆದ ತಿಂಗಳ ಪುಸ್ತಕಾವಲೋಕನ ಕಾರ್ಯಕ್ರಮದಲ್ಲಿ ಶಿವಾನಂದ ದಾಶ್ಯಾಳ ರಚಿಸಿದ 'ಶರಣು ಸಂಗಮ' ಕೃತಿಯನ್ನು ಕುರಿತು ಮಾತನಾಡಿದರು.

ಸಾಹಿತ್ಯವನ್ನು ಮನೆ ಮನೆಗೆ ಮತ್ತು ಮನ ಮನಕ್ಕೆ ತಲುಪಿಸುವ ಮಹತ್ವದ



ಜವಾಬ್ದಾರಿಯು ಸಾಹಿತ್ಯ ಪರಿಷತ್ತಿನ ಮೇಲೆ ಇದ್ದು, ರಬಕವಿ ಬನಹಟ್ಟಿ ತಾಲ್ಲೂಕು ಘಟಕ ಈ ಕಾರ್ಯವನ್ನು ಕಳೆದ 37 ತಿಂಗಳುಗಳಿಂದ ಮಾಡುತ್ತ ಬಂದಿರುವುದು ವಿಶೇಷವಾಗಿದೆ. ಗುರು, ಲಿಂಗಮ ಮತ್ತು ಜಂಗಮರನ್ನು ವಿಭೂತಿ, ರುದ್ರಾಕ್ಷಿ ಮತ್ತು ಮಂತ್ರದಿಂದ ಪೂಜಿಸಿದಾಗ ನಮಗೆ ಪಾದೋದಕ ಮತ್ತು ಪ್ರಸಾದ ದೊರೆಯುತ್ತದೆ.

ಕನ್ನಡ ನಾಡಿನ ಶರಣರ ಅನುಷ್ಠಾನದ, ಅವರ ಹುಟ್ಟಿದ ಸ್ಥಳಗಳು ಮತ್ತು ಅವರ ಸಮಾಧಿಗಳನ್ನು ಉಳಿಸಿ ಬೆಳೆಸುವ ಕಾರ್ಯವಾಗಬೇಕಾಗಿದೆ. ಈ ದಿಶೆಯಲ್ಲಿ ಪ್ರತಿಯೊಬ್ಬರೂ ಶ್ರಮಿಸಬೇಕು ಎಂದು ಐ. ಆರ್. ಮಠಪತಿ ತಿಳಿಸಿದರು.

ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮ. ಕೃ. ಮೇಗಾಡಿ ಮಾತನಾಡಿ, ತಾಲ್ಲೂಕು ಘಟಕ ನಿರಂತರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಬಂದಿದ್ದು, ಮುಂದಿನ ದಿನಗಳಲ್ಲಿ ತಾಲ್ಲೂಕು ಸಾಹಿತ್ಯ ಸಮ್ಮೇಳನವನ್ನು ಕೂಡಾ ನಡೆಸಲಾಗುವುದು ಎಂದರು.

ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಶಿವಾನಂದ ದಾಶ್ಯಾಳ, ಜಿ. ಎಸ್. ವಡಗಾಂವಿ, ಡಿ. ಎ. ಬಾಗಲಕೋಟ, ಈರಣ್ಣ ಬಾಣಕಾರ, ದಾಕ್ಷಾಯಣಿ ಮಂಡಿ ಮತ್ತು ಶಿವಾನಂದ ಬಾಗಲಕೋಟಮಠ ಭಾಗವಹಿಸಿದ್ದರು.

ಕಾಳಪ್ಪ ಪತ್ತಾರ ಅಧ್ಯಕ್ಷತೆ ವಹಿಸಿದ್ದರು.

ಜಯವಂತ ಕಾಡದೇವರ, ಮಲ್ಲಿಕಾರ್ಜುನ ಹುಲಗಬಾಳಿ, ಮಲ್ಲಪ್ಪ ಗಣಿ, ಮೋಹನ ಪತ್ತಾರ, ಮಲ್ಲೇಶಪ್ಪ ಕುಚನೂರ, ವೈ. ಬಿ. ಕೊರಡೂರ, ರವೀಂದ್ರ ಪತ್ತಾರ, ಮೀನಾಕ್ಷಿ ಸವದಿ, ಗೌರಿ ಮಿಳ್ಳಿ, ಸವಿತಾ ಹೊಸೂರ, ವಂದನಾ ಪತ್ತಾರ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

### ಶೋಷಿತ ವರ್ಗಗಳ ನಾಯಕ ಮಂಡ್ಯದ ಸುರೇಶ್ ಕಂಠಿ ಅಭಿನಂದನ ಸಮಾರಂಭ

## ಬಿಜೆಪಿಯ ವಿಜಯೇಂದ್ರ ಬೆಳೆದ ಹಾಗೆ ಸುರೇಶ್ ಕಂಠಿ, ಬೆಳೆಯುತ್ತಾರೆ: ಗೃಹ ಸಚಿವ ಪರಮೇಶ್ವರ ಅಭಿಮತ

ಕರ್ನಾಟಕ ಸರ್ಕಾರದ ಗೃಹ ಸಚಿವರಾದ ಡಾ ಜಿ ಪರಮೇಶ್ವರವರು ಸುವಿತ ವರ್ಗಗಳ ನಾಯಕ ಕಾಂಗ್ರೆಸ್ ಮುಖಂಡ ಮಂಡ್ಯದ ಸುರೇಶ್ ಕಂಠಿ ಅವರ ಕುರಿತು ಅಭಿನಂದನ ಗ್ರಂಥ "ಪರಮ ಕಂದ " ಪುಸ್ತಕ ಬಿಡುಗಡೆ ಮಾಡಿ ಮಾತನಾಡುತ್ತಾ ಸುರೇಶ್ ಕಂಠಿ ಶೋಷಿತ ವರ್ಗದ ನಾಯಕರಿಗೆ ಈ ರೀತಿಯ ಅಭಿನಂದನ ಸಮಾರಂಭಗಳು, ಅವರನ್ನು ಪ್ರೋತ್ಸಾಹಿಸುವ ಹಿನ್ನೆಲೆಯಲ್ಲಿ ಅವಶ್ಯಕವಾಗಿ ಮಾಡಬೇಕು ನಡೆಸುತ್ತಿರುವ ಅಭಿನಂದನಾ ಸಮಿತಿಯ ಸರ್ವ ಸದಸ್ಯರಿಗೆ ವಂದನೆಗಳು ಈ ರೀತಿಯ ಬೆನ್ನು ತಟ್ಟುವ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು ನಾನು ಅತ್ಯಂತ ಖುಷಿಯಿಂದ ಈ ಪುಸ್ತಕವನ್ನು ಬಿಡುಗಡೆ ಮಾಡಿ ಸುರೇಶ್ ಕಂಠಿ ಅವರಿಗೆ ಶುಭ ಹಾರೈಸುತ್ತೇನೆಎಂದುಶುಭಹಾರೈಸಿಮಾತನಾಡಿದರು.




ಅವರು, ಮುಂದುವರಿದ ಮಾತನಾಡುತ್ತಾ ನಾನೂ ನನ್ನ ಊರಿನ ಸಿದ್ದಗಂಗಾ ಮಠದಲ್ಲಿ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ, ಅಲ್ಲಿ ಎಲ್ಲರೂ ಬಿಜೆಪಿನಾಯಕರು,ನಾನುಒಬ್ಬನೇಕಾಂಗ್ರೆಸ್‌ನಾಯಕ. ಆ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪನವರ ಮಗನನ್ನು ನಾನು ಭವಿಷ್ಯದ ನಾಯಕ ಎಂದು ಹೇಳಿದೆ, ಆದರೆ ಇಂದು ಯಡಿಯೂರಪ್ಪನವರ ಮಗ ವಿಜಯೇಂದ್ರ ರಾಜ್ಯದ ನಾಯಕನಾಗಿ ಬೆಳೆದಿದ್ದಾರೆ. ಆದರೆ ಅ ಮಾತು ನನಗೆ ತಿಳಿಯದೇ ಮನ ತುಂಬಿ ಹಾಡಿದ ಮಾತು. ಈ ದಿನ ನಾನು ಸುರೇಶ್ ಕಂಠಿ ಭವಿಷ್ಯದ ನಾಯಕ ಎಂದು ಹೇಳುತ್ತಿದ್ದೇನೆ, ಮುಂದಿನ ಭವಿಷ್ಯದ ನಾಯಕನಗುತ್ತಾನೆ. ನಾನು ಈ ಕಾರ್ಯಕ್ರಮಕ್ಕೆ ಬೇಗ ಬರಬೇಕೆಂದುಹೊರಟೆ,ಆದರೆವಿಪರ್ಯಾಸವೆಂದರೆ ಮುಖ್ಯಮಂತ್ರಿಗಳ ಬೇರೆ ಬೇರೆ ಕಾರ್ಯಕ್ರಮ ಇರುವುದರಿಂದತಡವಾಗಿಬಂದಿದ್ದೇನೆ,ನೀವೆಲ್ಲಎಷ್ಟೇ ಸಮಯವಾದರೂ ನನ್ನ ಬರುವಿಕೆಗಾಗಿ ಕಾಯುತ್ತಾ ಕುಳಿತಿದಿರಿ ಎಂದರೆ ಸುರೇಶ್ ಕಂಠಿ ಈ ಶೋಷಿತ ಸಮಾಜದ ವೇದಿಕೆ ಮೂಲಕ ನಿಮ್ಮೇಎಲ್ಲಾರಿಗೆ ತೋರಿಸಿರುವ ಪ್ರೀತಿ ಹಾಗೂ ಕೆಲಸ ಕಾರ್ಯಗಳೇ ಇದಕ್ಕೆ ಸಾಕ್ಷಿ .

ನಾವೆಲ್ಲರೂ ಅಸಮಾನತೆ ವಿರುದ್ಧ ದನಿ ಎತ್ತಿ ಸಮಸಮಾಜದ ಪರಿಕಲ್ಪನೆಯೊಂದಿಗೆ ಬೇರೆಯಲಿಚ್ಚಿಸುತ್ತೇವೆಆದರೆಸಮಾಜದಲ್ಲಿಅಸಮಾನತೆ ಇನ್ನೂ ಜಾಗೃ?ತವಾಗಿದೆ . ಈ ನಾಡಿನಲ್ಲಿ ಅಸಮಾನತೆ ತೊಡೆಯುವ ಸಲುವಾಗಿ ಜನ್ಮ ತಳೆದ ಬುದ್ದ ಬಸವಣ್ಣ ರವನ್ನೇ ಒಪ್ಪದ ಸಮಾಜದಲ್ಲಿ ನಾವು ಸಮಾಜ ಕಟ್ಟುವ ಹುಚ್ಚು ಸಹವಾಸಕ್ಕೆ ಹೋದಂತಿದೆ. ಇಡೀ ದೇಶಕ್ಕೆ ಸಮಾನತೆ ಕೊಟ್ಟಂತ ಡಾಕ್ಟರ್. ಬಾಬಾ ಸಾಹೇಬರನ್ನು ಒಂದೂ ಜಾತಿಗೆ ಮೀಸಲಿರಿಸಿ ನಿಂದಿಸಿರುವ ಈ ಸಾಮಾಜ ನನ್ನನ್ನು ಬಿಡದೆ ನನ್ನ ಅಧಿಕಾರವನ್ನು ಲೆಕ್ಕಿಸದೆ ಕೇವಲ ನನ್ನ ಜಾತಿಯಿಂದ ಅಳೆಯುತ್ತಿದ್ದು ಹಲವು ಬಾರಿ ಅಪಮಾನಗಳನ್ನು ಅನುಭವಿಸಿದ್ದೇನೆ. ಈ ರೋಗಗ್ರಸ್ತ ಸಮಾಜದಲ್ಲಿ ಜಾತಿ ವ್ಯವಸ್ಥೆ ಎಂದಿಗೂ ನಶಿಸಿ ಹೋಗುವುದಿಲ್ಲ, ವಿಶ್ವಮಾನವ ಸಂದೇಶ ಸಾರಿದ ದಾರ್ಶನಿಕರನ್ನೇ ಒಡೆದು ಕೊಂದಿರುವ ಸಮಾಜದಲ್ಲಿ ಜಾತಿ ವ್ಯವಸ್ಥೆ ಬೂದಿ ಮುಚ್ಚಿದ ಕೆಂಡವೇ ಸರಿ.

ಶತಮಾನಗಳಿಂದ ಕಷ್ಟಗಳನ್ನೇ ಉಂಡ ನನ್ನ ಸಮಾಜದವರಿಗೆಇನ್ನೂಸರಿಯಾದವ್ಯವಸ್ಥೆಹೊಂದಿಲ್ಲ ಎನ್ನುವ ಕೊರಗು ನನ್ನ ಕಾಡುತ್ತಿದೆ, ದಯಮಾಡಿ ನನ್ನ ಬಂದವರಲ್ಲಿ ನನ್ನ ಕೋರಿಕೆ ಏನೆಂದರೆ ನೀವೂ ದಿನದ ಮೂರು ಹೊತ್ತು ಊಟದಲ್ಲಿ ಒಂದೂ ಹೊತ್ತಿನ ಊಟ ತ್ಯಜಿಸಿ ನಿಮ್ಮ ಮಕ್ಕಳ ಉಜ್ವಲ ಭವಿಷ್ಯದ ಉನ್ನತ ಶಿಕಷಣಕ್ಕಾಗಿ ಮುಡಿಪಾಗಿಟ್ಟರೆ ಅವರು ಮುಂಬರುವ ದಿನಗಳಲ್ಲಿ ಒಳ್ಳೆಯ ನಾಗರಿಕನಾಗಿ ಸಧೃಡ ಪ್ರಜೆಯಾಗಿ ಮಾದರಿಯಾಗಿ ಬಾಳುವುದನ್ನು ನಾ ನೋಡಬೇಕು. ನಮಗೆ ಎಲ್ಲರಂತೆ ಬದುಕು ಕಟ್ಟಿಕೊಳ್ಳಲು ಬಂಡವಾಳವಾಗಲಿ ದುಡಿದು ಬದುಕಲು ಭೂಮಿಯಾಗಲಿ ಇಲ್ಲಾ , ಬಹುಪಾಲು ಭೂಮಿ ಹೀನಾರಿರುವಾಗ ಈ ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ಖಾಸಗೀಕರಣ ಎಂಬಾ ಪೆಡಂಬೂತಕ್ಕೆ ಬಲಿಯಾಗಿ ಮತ್ತೆ ಶೋಷಣೆ ಅನುಭವಿಸುವ ದಿನಮಾನಗಳು ಸನ್ನಿಹಿತ. ಆದ್ದರಿಂದ ದಯಮಾಡಿ ಶಿಕ್ಷಣವನ್ನೇ ಅಸ್ತ್ರವಾಗಿಸಿ ಸ್ವಾಭಿಮಾನಿ ಜೀವನ ಸಾಗಿಸುತ್ತಾ ಆಳುವ ವರ್ಗ ನಾವಾಗಬೇಕಿದೆ. ಈ ಕಾರ್ಯ ನನ್ನೊಬ್ಬನಿಂದ ಸಾದ್ಯವಿಲ್ಲ ಅದಕ್ಕೆ ಎಲ್ಲರನ್ನೂ ಒಗ್ಗೂಡಿಸಿ ಸಮಾಜಕ್ಕೆ ತುಡಿಯುವ ನಿಷ್ಕಲ್ಮಷ ಮನಸಿರುವಂತ ನಿಸ್ವಾರ್ಥಿ ನಾಯಕನ ಅವಶ್ಯವಿದೆ . ಆ ಎಲ್ಲಾ ಗುಣ ಹೊಂದಿರುವ ಸುರೇಶ್ ಕಂಠಿ ಯಂತ ಯುವ ನಾಯಕನಿಂದ ಎಲ್ಲವು ಸಾಧ್ಯ.50 ವಸಂತ ತುಂಬಿರುವ ಕಂಠಿಂ-ರು ರಾಜಕೀಯದ ಮುಂದಿನ ಹೊಸ ಅಧ್ಯಾಯ, ಹಲವು ಪ್ರಗತಿಪರ ಚಿಂತನೆಯೊಂದಿಗೆ ಹೊಸ ಹೊಸ ಜವಾಬ್ದಾರಿಗಳೊಂದಿಗೆ ನಿರಂತರವಾಗಿ ಸಾಗಿ ಎಲ್ಲರನ್ನೂ ಸಮವಾಗಿ ತಲುಪಲಿ ಎಂದೂ ಹೇಳುತ್ತಾ ಕಂಠಿ 50 ಅಭಿನಂದನ ಸಮಿತಿ ಇನ್ನು ಮುಂದೆ ಹೆಚ್ಚು ಹೆಚ್ಚುಸಮಾಜಮುಖಿಕಾರ್ಯಕ್ರಮವನ್ನುಮಾಡುತ್ತಾ ಸಾಗಲಿಹಾಗೂಹೊಸವರುಷನಿಮ್ಮೆಲ್ಲರಿಗೂಒಳಿತನ್ನು ಮಾಡಲಿ ಎಂದು ಆಶಿಸುತ್ತೇನೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಮಾನ್ಯ ಕೃಷಿ ಸಚಿವಾರದ ಚೆಲುವರಾಯಸ್ವಾಮಿ, ಶಾಸಕರಾದ ನರೇಂದ್ರ ಸ್ವಾಮಿ, ಶಾಸಕರಾದರವಿಗಣಿಗ,ಉದಯ್‌ಕುಮಾರ್,ವಿಧಾನ ಪರಿಷತ್‌ಸದಸ್ಯರಾದಸುದಾಮ್‌ದಾಸ್,ಜ್ಞಾನಪ್ರಕಾಶ್ ಸ್ವಾಮೀಜಿಗಳು, ಮುಖಂಡರಾದ ಬಿ ಗೋಪಾಲ್ ರವರು, ಅಧಿಕಾರಿಗಳಾದ ಅರುಣ್ ಚಕ್ರವರ್ತಿ, ಉಣ ಮಹಾನಂದ್, ಅಭಿನಂದನಾ ಸಮಿತಿಯು ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State